2) ವಿತ್ತೀಯ ಕಾರ್ಯಕಲಾಪ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವಂಥ 2005–06ನೇ ಸಾಲಿನ ಪೂರಕ . . . .

ಅಧ್ಯಕ್ಷರು: ಅದಲ್ಲ ಯಡಿಯೂರಪ್ಪನವರೆ,

ಶ್ರೀ ಬಿ.ಎಸ್. ಯಡಿಯೂರಪ್ಪ: ನನ್ನ ಹೆಸರಿನ ಮುಂದಿರುವ ಕಾಗದ . . .

3) ಮಾನ್ಯ ಸಭಾಧ್ಯಕ್ಷರು ನೀಡಿದ್ದ ತೀರ್ಪನ್ನು ಪುನರ್‌ಪರಿಶೀಲನೆ ಮಾಡಲು ಮನವಿ.

ವಿಷಯ: ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯವನ್ನು ಮಂಡಿಸುವಂತೆ ನೀಡಿರುವ ತೀರ್ಪು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗುರುಮಿಠ್‌ಕಲ್): ಮಾನ್ಯ ಅಧ್ಯಕ್ಷರೆ, ಅದು ಇತ್ಯರ್ಥವಾಗುವುದಕ್ಕಿಂತ ಮೊದಲು ಇದನ್ನು ತೆಗೆದುಕೊಳ್ಳತಕ್ಕದ್ದು ಸರಿಯಲ್ಲ. ತಾವು ತೆಗೆದುಕೊಂಡಂಥ ನಿರ್ಣಯಕ್ಕೆ ನಾವೇನು ಪ್ರತಿಭಟನೆಯನ್ನೇನು ಮಾಡುತ್ತಿಲ್ಲವೆಂದು ನಾವು ಈಗಾಗಲೇ ಹೇಳಿದ್ದೇವೆ.

ಅಧ್ಯಕ್ಷರು: ಮೋಷನ್‌ಗೆ ಹೋದಾಗ ಇದರ ಬಗ್ಗೆ ಮಾತನಾಡೋಣ. ಮೊದಲು ಕಾಗದಪತ್ರಗಳನ್ನು ಮುಗಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ತೆಗೆದುಕೊಂಡ ನಿರ್ಣಯಕ್ಕೆ ನಾವೇನೂ ಪ್ರತಿಭಟನೆ ಮಾಡುತ್ತಿಲ್ಲ. ನಾವು ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಕೊಟ್ಟಂಥ ನಿರ್ಣಯವನ್ನು ಪನರ್‌ಪರಿಶೀಲನೆ ಮಾಡಿ. ಕಾರಣ ಇಷ್ಟೆ, ರೂಲ್ಸ್ ಆಫ್ ಪ್ರೊಸೀಜರ್ Cannot override the provisions of the Constitution. ಸಂವಿಧಾನ ಯಾವಾಗಲೂ ಕೂಡ ಸಾರ್ವಭೌಮ. ಅದರ ಕೆಳಗಡೆ ನಾವು ರೂಲ್ಸ್ ಮಾಡುತ್ತೇವೆ, ಕಾನೂನುಗಳನ್ನು ಮಾಡುತ್ತೇವೆ, ಇವೆಲ್ಲವನ್ನೂ ಕೂಡ ಮಾಡುವುದು ಸಂವಿಧಾನದ ಒಳಗಡೆ. ಆ ಸಂವಿಧಾನದ ವಿರುದ್ಧ ಯಾವುದೇ ಕಾನೂನು ಇರಲಿ, ರೂಲ್ಸ್ ಇರಲಿ ಅದು setaside ಆಗತಕ್ಕದ್ದು ಕೋರ್ಟ್‌ನಲ್ಲೂ ಇದೆ, ನಾವೂ ಕೂಡ ಅನೇಕ ಸಾರಿ ಕೋರ್ಟ್‌ಗೆ ಜಡ್ಜ್‌ಮೆಂಟ್ ಮೇಲೆ ಪುನರ್‌ಪರಿಶೀಲನೆ ಮಾಡುತ್ತೇವೆ. ಅದಕ್ಕೆ ನನ್ನ ಕಳಕಳಿಯ ಮನವಿ ಏನೆಂದರೆ ತಾವು ಪುನರ್‌ಪರಿಶೀಲನೆ ಮಾಡಿ. ಏಕೆಂದರೆ ಆರ್ಟಿಕಲ್ 175 ಕ್ಲಿಯರ್ ಆಗಿ ಇದೆ. ರಾಜ್ಯಪಾಲರು ಬಂದು ಮೆಸೇಜ್ ಕೊಡತಕ್ಕದ್ದಷ್ಟೇ ಹೊರತು 'Motion of Thanks' ಅದರಲ್ಲಿ ಬರುವುದಿಲ್ಲವೆಂದು ಕ್ಲಿಯರ್ ಕಟ್ ಆಗಿ ಆರ್ಟಿಕಲ್ 175ರಲ್ಲಿ ಹೇಳಿದೆ. ಅದೇ ರೀತಿ ತಮಗೂ ಗೊತ್ತಿದೆ, ಮನವರಿಕೆಯಾಗಿದೆ. ಆರ್ಟಿಕಲ್ 176ರ ಕೆಳಗೆ ಅದು ಮ್ಯಾಂಡೇಟರಿ ಪ್ರಾವಿಜನ್ ಇದ್ದು ಅವರು ಬಂದು ಈ ಸದನಕ್ಕೆ ಮಾತನಾಡಲೇಬೇಕು, ಮಾತನಾಡಿದ ನಂತರ ಅದಕ್ಕೆ ಟೈಮ್ ಫಿಕ್ಸ್ ಮಾಡತಕ್ಕದ್ದು, ಡೇಟ್ ಫಿಕ್ಸ್ ಮಾಡತಕ್ಕದ್ದು, ಚರ್ಚೆ ಮಾಡತಕ್ಕದ್ದು ಕಡ್ಡಾಯ, ಕಂಪಲ್ಸರಿ ಇರತಕ್ಕದ್ದು. ಅದಕ್ಕೆ ತಾವು ಇವತ್ತು ಮನ್ನಣೆ ಕೊಡಬೇಕಾಗಿತ್ತು. ಆದರೆ ದುರ್ದೈವವಶಾತ್ ಅದನ್ನು ತಾವು ತಳ್ಳಿಹಾಕಿದಿರಿ. ಇವತ್ತು ಆ ರೀತಿ ತಳ್ಳಿಹಾಕಿದ ಮೇಲೆ ನಮ್ಮ ಮುಂದೆ ಇರತಕ್ಕದ್ದು ಆರ್ಟಿಕಲ್ 175ರ ಕೆಳಗೆ ಮಾನ್ಯ ರಾಜ್ಯಪಾಲರು ಸ್ವತಃ ಒಂದು ನೋಟೀಸ್‌ನ್ನು ಕೊಟ್ಟು ನಾನು ಈ ಸದನಕ್ಕೆ ಬರುತ್ತೇನೆ, ನೀವೆಲ್ಲರೂ ಕೂಡ ಮೆಂಬರ್ಸ್ ಹಾಜರಾತಿಯನ್ನು ಕಡ್ಡಾಯಪಡಿಸಬೇಕೆಂದು ಹೇಳಿದ್ದರು. ಆದರೆ ಇದರ ಹಿಂದೆ ಆರ್ಟಿಕಲ್ 176 ಪ್ರಕಾರ ನೋಟೀಸ್ ಕೊಟ್ಟಿದ್ದರು ಅದರಲ್ಲೇನಿತ್ತು? ಅವರು ಹೇಳಿದ್ದೇನೆಂದರೆ ನಾನು

ಕೆಲವು ಕಾರಣಗಳಿಂದ ಈ ಸದನವನ್ನು ಕರೆಯಲು ಹೇಳುತ್ತಿದ್ದೇನೆ, ಆ ಕಾರಣಗಳೇನು ಎಂಬುದನ್ನು ಸದನದ ಮುಂದಿಡಬೇಕಾಗುತ್ತದೆ, ಅದಕ್ಕೆ ತಾವು ಸದನವನ್ನು ಕರೆಯಿರಿ ಎಂದು ಹೇಳಿದ ಮೇಲೆ ಆ ಬಗ್ಗೆ ವಿಶೇಷವಾಗಿ ತಾವೆಲ್ಲರೂ, ಸರ್ಕಾರದವರು ಒಂದು ನಿರ್ಣಯ ತೆಗೆದುಕೊಂಡು ಕ್ಯಾಬಿನೆಟ್‌ನಲ್ಲಿ ಅದರ ಬಗ್ಗೆ ಚರ್ಚೆ ಮಾಡಿ ಒಂದು ಸವಿಸ್ತಾರವಾದಂಥ ಡಾಕ್ಯುಮೆಂಟ್‌ನ್ನು ತಯಾರು ಮಾಡಿ ಅವರ ಮುಖಾಂತರ ಓದಿಸಿ ಅದು ಜಂಟಿ ಸದನದಲ್ಲಿ ಇಡತಕ್ಕದ್ದು ಮ್ಯಾಂಡೇಟರಿ ಪ್ರಾವಿಜನ್. ಅದಕ್ಕೆ ನಾವು ಅವರಿಗೂ ಕೂಡ ಗೌರವ ಕೊಡೋಣ. ಗೌರ್ನರ್‌ರವರಿಗೂ ಕೂಡ ಅವಮಾನ ಮಾಡತಕ್ಕದ್ದು ಬೇಡ, ಅವರ ಬಗ್ಗೆ ಮಾತನಾಡತಕ್ಕ ಅವಶ್ಯಕತೆ ಇಲ್ಲ. ತಾವು ಸಂವಿಧಾನ ಬಾಹಿರವಾಗಿ ಕೊಟ್ಟಂಥ ತೀರ್ಮಾನವೇನಿದೆ ಅದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ನಾವು ಏಕೆ ಹೇಳುತ್ತಿದ್ದೇವೆಂದರೆ ಸಂವಿಧಾನದಲ್ಲಿ ಇದು ಕ್ಲಿಯರ್ ಕಟ್ ಆಗಿದೆ. Discretion ನಿಮಗೆ ಇದ್ದರೆ ನಾವು question ಮಾಡುತ್ತಿರಲಿಲ್ಲ. Rules of Procedure ಪ್ರಕಾರ ತಮಗೆ Discretion ಇದ್ದು ಆ ರೂಲ್ಸ್ completely ತಮ್ಮ ಅಧೀನದಲ್ಲಿದ್ದು ಚಲಾಯಿಸಲೇಬೇಕು ಎಂಬ ಪ್ರಾವಿಜನ್ ಇದ್ದಿದ್ದರೆ ಮಾಡಬಹುದಿತ್ತು. ಇಲ್ಲವೇ entire rules suspend ಮಾಡಿ ಕೂಡ ತಾವು ಈ ಸದನಕ್ಕೆ ಹೇಳಬಹುದು. ಆದರೆ rules ಮೀರಿ ಸಂವಿಧಾನದಲ್ಲಿ ಇರತಕ್ಕಂಥ ಕಾನೂನುಗಳನ್ನು, articleಗಳನ್ನು suspend ಮಾಡುವುದಕ್ಕೆ ನಿಮಗೂ ಅಧಿಕಾರ ಇಲ್ಲ, ನಮಗೂ ಅಧಿಕಾರ ಇಲ್ಲ. Unless it is changed, ಅದರಲ್ಲಿ ಬದಲಾವಣೆ ಆದಾಗ ಮಾತ್ರ ನಾವು ಏನಾದರೂ ಗಮನಕ್ಕೆ ತೆಗೆದುಕೊಳ್ಳಬಹುದೆ ಹೊರತಾಗಿ as long as Article 174 is there, 175 is there, 176 is there, ಅದಕ್ಕೆ ನಾವು ಗೌರವ ಕೊಡಲೇಬೇಕಾಗುತ್ತದೆ. ಅದಕ್ಕಾಗಿ ನಾನು ತಮಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ, ದಯವಿಟ್ಟು ತಾವು prestige ಮೇಲೆ ನಿಲ್ಲಬೇಡಿ. ಏಕೆಂದರೆ ಇಲ್ಲಿ ಒಂದು ಸಲ ನಾನು ಒಂದು ತೀರ್ಮಾನವನ್ನು ಕೊಟ್ಟಿದ್ದೇನೆ, ಅದು ಅಂತಿಮ ಅನ್ನತಕ್ಕಂಥದ್ದು ಆಗಬಾರದು. ಅದು ಯಾವಾಗ ಹೇಳಬಹುದಾಗಿತ್ತು. ಎಂದರೆ, normal courseನಲ್ಲಿ ಅಥವಾ ತಾವು Rules of Procedureನಲ್ಲಿ discretion ಇದ್ದಾಗ, ಇಲ್ಲವೆಂದರೆ ತಮಗೆ suspend ಮಾಡತಕ್ಕಂಥ ಅಧಿಕಾರ ಇದೆ, ನಾನು suspend ಮಾಡಿ ಮಾಡಿದ್ದೇನೆ ಎಂದು ಹೇಳಿದರೆ ಒಂದು ತರಹ. ಸದನದ ಹೊರಗಡೆ ರಾಜ್ಯದ ಜನತೆಗೆ ಒಂದು ತಪ್ಪು message ಹೋಗಬಾರದು. ಏಕೆಂದರೆ, ವಿರೋಧ ಪಕ್ಷದವರು ಹಠ ಹಿಡಿದುಕೊಂಡು ಪದೇ ಪದೇ ಇವರು ಇದೇ ಹೇಳುತ್ತಿದ್ದಾರೆ ಮತ್ತು ಸದನದಲ್ಲಿ ನಡೆಯತಕ್ಕಂಥ ಕಲಾಪಗಳಿಗೆ ಅಡ್ಡಿ ಪಡಿಸುತ್ತಿದ್ದಾರೆ, ಇವರಿಗೆ ಸದಿಚ್ಛೆ ಇಲ್ಲ ಮತ್ತು ರಾಜ್ಯದ ಜನರ ಬಗ್ಗೆ ಅಥವಾ ಬೇರೆ ಬೇರೆ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುತ್ತಿಲ್ಲ, ಬರೇ ಯಾವುದೋ ಒಂದು technical matter ಮೇಲೆ ಇವರು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ ಅನ್ನತಕ್ಕಂಥ ಅಭಿಪ್ರಾಯ ಬರಬಾರದು. ಇದು technical question ಅಲ್ಲ. ಯಾವ ಸದನದಲ್ಲಿ ನಾವು ಕಾನೂನುಗಳನ್ನು ಮಾಡುತ್ತೇವೋ, ಯಾವ ಸಂವಿಧಾನದ ಪ್ರಕಾರ ಈ ಒಂದು ಸದನವನ್ನು ರಚಿಸಲಾಗಿದೆಯೋ, ಆ ಸದನದ ಗೌರವದ ಪ್ರಶ್ನೆ ಕೂಡ ಹೌದು ಮತ್ತು ಆ ಸಂವಿಧಾನದ ಗೌರವದ ಪ್ರಶ್ನೆ ಕೂಡ ಹೌದು. ಆ ಸಂವಿಧಾನದ ಗೌರವದ ಪ್ರಶ್ನೆ ಕೂಡ ಹೌದು. ಆ ಸಂವಿಧಾನವನ್ನು ಎತ್ತಿ ಹಿಡಿಯತಕ್ಕಂಥ ಕೆಲಸವನ್ನು ನಾವೆಲ್ಲರೂ ಕೂಡ ಮಾಡಬೇಕಾಗಿದೆ. ಅದೇ ರೀತಿಯಾಗಿ ಈ ಸದನಕ್ಕೆ ಗೌರವವನ್ನೂ ಕೂಡ ನಾವು ಕೊಡಬೇಕಾಗಿದೆ. ಅದಕ್ಕಾಗಿ ದಯವಿಟ್ಟು ಇನ್ನೊಮ್ಮೆ ತಮಗೆ

ಕೇಳಿಕೊಳ್ಳುತ್ತೇನೆ. ಹೊರಗಿನವರು ಅನೇಕ ಜನರೂ ಕೂಡ ತಮಗೆ ಇದರ ಬಗ್ಗೆ ಹೇಳಿರಬಹುದು, legal experts ಕೂಡ ಹೇಳಿರಬಹುದು, ಇದು ತಪ್ಪಾಗಿದೆ, ಏನೋ ಸರಿಪಡಿಸಿಕೊಂಡು ಹಾಗೆಯೇ ಮುಂದೆ ಹೋಗೋಣ ಅಂದರೆ naturally, ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳುವುದಕ್ಕಾಗುವುದಿಲ್ಲ. ಏನೋ discretion ಇದ್ದಾಗ ತಪ್ಪು ಆಯಿತು ಅಥವಾ precedent ಇತ್ತು ಅಥವಾ ಏನಾದರೂ ಇಲ್ಲಿಯವರೆಗೆ ಒಂದು ಪದ್ಧತಿ ಇತ್ತು, ಆ ಪದ್ಧತಿ ಮುರಿದು ಹೋಗುತ್ತದೆ ಎಂದರೆ ಹೋಗಬಹುದು, ಆದರೆ ಇಲ್ಲಿ precedents ಇಲ್ಲ, customs ಇಲ್ಲ, ಆ ರೀತಿಯಾಗಿ usages ಕೂಡ ಇಲ್ಲ, ಅಥವಾ ಮತ್ತೆ ಬೇರೆ ರೀತಿಯಿಂದ ನಡೆದುಕೊಳ್ಳತಕ್ಕಂಥದ್ದಕ್ಕೆ ಇದರಲ್ಲಿ ಸಾಧ್ಯತೆ ಇಲ್ಲ. ಅದಕ್ಕೆ ಇಲ್ಲಿ Articleಗೆ distinction ಕೂಡ ಇದೆ. ಆರ್ಟಿಕಲ್ 175ರಲ್ಲಿ ಏನು ಮಾಡಬೇಕೆಂಬುದನ್ನು clear ಆಗಿ ಹೇಳಿದ್ದಾರೆ, ಆರ್ಟಿಕಲ್ 176 ರಲ್ಲಿ ಏನು ಮಾಡಬೇಕೆಂಬುದನ್ನೂ ಸಹ clear ಆಗಿ ಹೇಳಿದ್ದಾರೆ. ಅದೆರಡರಲ್ಲೂ ಕೂಡ ವ್ಯತ್ಯಾಸ ಇದೆ. ಅವೆರಡೂ Article create ಮಾಡತಕ್ಕಂಥ ಉದ್ದೇಶವೇನೆಂದರೆ, 175ರಲ್ಲಿ ಇರತಕ್ಕಂಥ ಉದ್ದೇಶ, ನೇರವಾಗಿ ಬಂದು ಅವರು message ಕೊಡತಕ್ಕಂಥದ್ದು, suo-moto ಬಂದು express ಮಾಡತಕ್ಕಂಥದ್ದು, ನಮ್ಮ ಹಾಜರಾತಿಯನ್ನು ತಮ್ಮ ಮುಖಾಂತರ ಕಡ್ಡಾಯ ಪಡಿಸತಕ್ಕಂಥದ್ದು ಆಗಿದೆ. ಈ ಕೆಲಸವನ್ನು ಮಾಡಿ any number of times he can give messages. Weekly he can give messages, fifteen daysಗೊಮ್ಮೆ message ಕೊಡಬಹುದು, ತಿಂಗಳಿಗೊಮ್ಮೆಯಾದರೂ ಕೊಡಬಹುದು, ಅವರಿಗೆ ಇಚ್ಛೆ ಬಂದಾಗ, ಸಲಹೆ ಕೊಡಬೇಕೆಂದಾಗ, ತಮಗೆ ಹೇಳಿ ತಮ್ಮ ಹಾಜರಾತಿಯನ್ನು ಕಡ್ಡಾಯ ಪಡಿಸಿ, ಇಲ್ಲಿ ಮಾಡಬಹುದು. ಆದರೆ ಆಟಿಕಲ್ಸ್ 176ರಲ್ಲಿ ಇದು ಕಡ್ಡಾಯ. ಪ್ರತಿ ವರ್ಷ first session ನಡೆಯುವಾಗ, ಅದು ಮಾಡಲೇಬೇಕು. ಇಲ್ಲವೇ ಹೊಸದಾಗಿ ಸರ್ಕಾರ ಚುನಾಯಿತವಾಗಿ ಬಂದಾಗ ಅದು ಆಗಲೇಬೇಕಾದಂತಹ ವಿಷಯವಾಗಿದೆ. ಇವೆರಡಕ್ಕೂ ಕೂಡ ಅಲ್ಲೇ clear ಆಗಿ distinction ಮಾಡಿದ ಮೇಲೆ ಪುನಃ ನಾವು ಅದಕ್ಕೆ interpretation ಮಾಡಿಕೊಂಡು, ತಪ್ಪು ದಾರಿಗೆ ಎಳೆಯುವಂಥಾದ್ದು, wrong precedent ಹಾಕತಕ್ಕಂಥದ್ದನ್ನು ನಾವು ಮಾಡಿದರೆ, ಅದು ತಪ್ಪಾಗುತ್ತದೆ. ದಯವಿಟ್ಟು ತಾವು ಅನ್ಯಥಾ ಭಾವಿಸಬಾರದು. ತಾವೂ ಕೂಡ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ. ಇಲ್ಲವೇ ಏನಾದರೂ ಇದರ ಮೇಲೆ ಚರ್ಚೆಯೇ ಮಾಡಬೇಕೆಂದರೆ, ಆರ್ಟಿಕಲ್ 175ರ ಮೇಲೆಯೇ ಚರ್ಚೆ ಮಾಡಿ, ಅದರಡಿ motion of thanks ಬರುವುದಿಲ್ಲ. ಏಕೆಂದರೆ, motion of thanksಗೆ specific ಆಗಿ ಆರ್ಟಿಕಲ್ 176ರಲ್ಲಿ ಹೇಳಿದ್ದಾರೆ. ಅದಕ್ಕಾಗಿ ದಯವಿಟ್ಟು ಆರ್ಟಿಕಲ್ 175(1)ರ ಕೆಳಗಡೆಯೇ ಚರ್ಚೆ ಮಾಡಬೇಕೆಂದರೆ, ತಾವು ಚರ್ಚೆ ಮಾಡಿ, ಆದರೆ motion of thanks ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ಮತ್ತೊಮ್ಮೆ ನಾನು ತಮಗೆ appeal ಮಾಡುತ್ತೇನೆ, ಇದನ್ನು ತಾವು review ಮಾಡಿ. ಆ ಒಂದು Article 175 or 176 ರ ಕೆಳಗೆ ಮತ್ತು ತಾವೇನು ಎರಡು ನೋಟೀಸ್‌ಗಳನ್ನು ಕೊಟ್ಟಿದ್ದೀರಿ, Article 174ರಲ್ಲಿ ನೋಟೀಸ್ ಏನು ಕೊಟ್ಟಿದ್ದೀರಿ, ಅದನ್ನು ತಾವು ನೋಡಿ, Article 175(1)ರ ಕೆಳಗೆ ತಾವೇನು ನೋಟೀಸ್ ಕೊಟ್ಟಿದ್ದೀರೋ ಅದನ್ನೂ ಕೂಡ ತಾವು ನೋಡಿ. ಎರಡೂ ನೋಟೀಸ್‌ಗಳಲ್ಲಿ ವ್ಯತ್ಯಾಸವಿಲ್ಲವೆಂದರೆ, ತಾವು ಹೇಳಿದಂತೆ ನಾನು ಕೆಳಗೆ ಕುಳಿತುಕೊಳ್ಳುತ್ತೇನೆ. ಆ ಎರಡೂ ನೋಟೀಸ್‌ಗಳಲ್ಲಿ ವ್ಯತ್ಯಾಸ ಇದೆ. ಒಂದರಲ್ಲಿ ನಮ್ಮ presence ಇರಲೇಬೇಕೆನ್ನುವುದು,

ಮತ್ತೊಂದರಲ್ಲಿ ಆರ್ಟಿಕಲ್ 174ರಲ್ಲಿ ಈ ಒಂದು ಮನೆಗೆ ಅವರು ಕಡ್ಡಾಯವಾಗಿ address ಮಾಡಲೇಬೇಕು ಅನ್ನತಕ್ಕಂಥದ್ದಕ್ಕೆ ಬೇರೆ ನೋಟೀಸ್, ಬೇರೆ wordings ಇಲ್ಲವೆನ್ನುವುದಾದರೆ, ನಾನು ಈ ಮಾತನ್ನು ಕೇಳುವುದಿಲ್ಲ. ನಿಮ್ಮ Legislature Secretariatನಿಂದ ಕೊಟ್ಟಂತಹ ನೋಟೀಸ್‌ಗಳನ್ನೇ ನೋಡಿ ಅಥವಾ Governorರವರು ಉಪಯೋಗ ಮಾಡಿದಂತಹ ಅಂದರೆ direction ಕೊಟ್ಟಂತಹ ಭಾಷೆಯನ್ನೇ ನೋಡಿ, ಯಾವುದನ್ನು ನೋಡಿದರೂ ಕೂಡ ಅದರಲ್ಲಿ ಸ್ಪಷ್ಟವಾಗಿ ನಿಮಗೆ ಕಾಣುತ್ತದೆ. ಅದಕ್ಕಾಗಿ ದಯವಿಟ್ಟು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ, ತಾವು ಇದನ್ನು ಪುನರ್ ಪರಿಶೀಲನೆ ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾದುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರಲ್ಲಿ . . . .

ಅಧ್ಯಕ್ಷರು: ವಿಧೇಯಕಗಳೆಲ್ಲಾ ಮಂಡನೆಯಾಗಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಾಗಲೇ ಅವರು ಶುರು ಮಾಡಿದ್ದಾರಲ್ಲಾ.

Mr. Speaker: Papers laid ಇತ್ಯಾದಿಗಳೆಲ್ಲಾ ಆಗಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗಾಗಲೇ ಮಾನ್ಯ ಖರ್ಗೆಯವರು ಶುರು ಮಾಡಿದ್ದಾರಲ್ಲಾ. ಆದ್ದರಿಂದ ಎರಡೇ ಎರಡು ಮಾತನ್ನು ನಾನೂ ಕೂಡ ಆಡುತ್ತೇನೆ. ಸಾರ್, ಇದರಲ್ಲಿ . . . .

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್‌ನ ಪುನರ್ ಪರಿಶೀಲನೆ ಸಲುವಾಗಿ ತಮಗೆ ಅವರು ವಿನಂತಿ ಮಾಡಿಕೊಂಡಿದ್ದಾರೆ. ಈಗ ಮತ್ತೆ ಅದನ್ನೇ ಏಕೆ ಹೇಳುವುದು? ಈಗಾಗಲೇ ಮಾನ್ಯ ಖರ್ಗೆಯವರು point ಏನು ಹೇಳಿದರೋ, ಮತ್ತೆ ಅದನ್ನೇ ಎಲ್ಲರೂ ಹೇಳುವಂಥಾದ್ದು ಆದರೆ ಹೇಗೆ? ಪುನರ್ ಪರಿಶೀಲನೆಗೆ ಅವರು ತಮಗೆ request ಮಾಡಿದ್ದಾರೆ. ಅದರ ಬಗ್ಗೆ ತೀರ್ಪು ನೀಡುವುದು ತಮಗೆ ಬಿಟ್ಟಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ನಾವು ಮತ್ತೆ ಅದನ್ನೇ ಹೇಳುತ್ತೇವೆ ಎನ್ನುವುದು ಹೇಗೆ ಗೊತ್ತು?

ಶ್ರೀ ಜಗದೀಶ್ ಶೆಟ್ಟರ್: ನಿಮ್ಮ ಬಗ್ಗೆ ಅಲ್ಲ. ಅವರು ಈಗಾಗಲೇ point ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಬೇರೆ ಹೇಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಒಂದು ನಿಮಿಷ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಖರ್ಗೆಯವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಬೇರೆಯದೇ ಆದ ಅಭಿಪ್ರಾಯವನ್ನು ಹೇಳಬಹುದು.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ, ಈಗ ಮಾನ್ಯ ಸಭಾ ನಾಯಕರು ಏನು ಹೇಳುತ್ತಾರೆ, ಕೇಳೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗ ಆರ್ಟಿಕಲ್ 175 ಮತ್ತು 176ರ ವಿಷಯದಲ್ಲಿ ಕಳೆದ ಎರಡು ದಿವಸಗಳಿಂದ ಸದನದಲ್ಲಿ ಸುದೀರ್ಘವಾಗಿ, ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರು ಚರ್ಚೆಯನ್ನೇನು ಮಾಡಿದ್ದಾರೆ, ಈಗ ಮತ್ತೆ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ, ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತೆ ಅವರ ಭಾವನೆಗಳನ್ನು ವ್ಯಕ್ತಪಡಿಸಲಿಕ್ಕೆ ಹೊರಟಿದ್ದಾರೆ. ಈಗಾಗಲೇ ಮೊನ್ನೆ ಒಂದು ದಿವಸ ಸುದೀರ್ಘ ಚರ್ಚೆ ಮಾಡಿ, ಈ ವಿಷಯಗಳ ಬಗ್ಗೆ ಎಲ್ಲರ ಅಭಿಪ್ರಾಯ ಪಡೆದ ನಂತರ ತಾವೊಂದು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೆ ಮತ್ತೆ ನಿನ್ನೆಯಿಂದ ಈ ವಿಷಯದಲ್ಲಿ ಏನು ಚರ್ಚೆಗಳಾಗಿ ಸಭೆಯನ್ನು ಮುಂದೂಡತಕ್ಕಂಥ ಕೆಲಸ ಏನಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಸದಸ್ಯರಲ್ಲಿ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ, ಸಾಕಷ್ಟು ಚರ್ಚೆಗಳಾಗಿ ತಾವೇನು ರೂಲಿಂಗ್ ಕೊಟ್ಟಿದ್ದೀರಿ, ಮತ್ತೆ ಪುನಃ ಈ ವಿಷಯದಲ್ಲಿ ಚರ್ಚೆ ಮಾಡತಕ್ಕಂಥದ್ದು ಸೂಕ್ತವಲ್ಲ. ಈ ಸಂದರ್ಭದಲ್ಲಿ ರಾಜ್ಯದ ಹಲವಾರು ಸಮಸ್ಯೆಗಳೇನಿದೆ, ಆ ಸಮಸ್ಯೆಗಳನ್ನು ಇವತ್ತು ನಾವು ಈ ಸದನದ ಮುಖಾಂತರ ಚರ್ಚೆಯನ್ನು ಮಾಡಿ, ಸಮಸ್ಯೆಯನ್ನು ಬಗೆಹರಿಸತಕ್ಕಂಥದ್ದಕ್ಕೆ ಎಲ್ಲರ ಸಲಹೆಯನ್ನೇನು ಪಡೆಯಬೇಕಾಗಿದೆ, ಮತ್ತೆ ಸದನದಲ್ಲಿ ಈ ವಿಷಯಗಳ ಬಗ್ಗೆ ಚರ್ಚೆ ಮಾಡಿ ಸಮಯವನ್ನು ವ್ಯರ್ಥ ಮಾಡದೆ, ದಯವಿಟ್ಟು ನಾನು ಎಲ್ಲಾ ಶಾಸಕರಲ್ಲಿ ಮನವಿ ಮಾಡುತ್ತೇನೆ, ವಿರೋಧ ಪಕ್ಷದ ಶಾಸಕರಲ್ಲೂ ಮನವಿ ಮಾಡುತ್ತೇನೆ, ಈ ಸಂದರ್ಭದಲ್ಲಿ ದಯವಿಟ್ಟು ತಾವು ರೂಲಿಂಗ್ ಕೊಟ್ಟ ಮೇಲೆ ಮತ್ತೆ ಪುನಃ ಈ ವಿಷಯದಲ್ಲಿ ಚರ್ಚೆ ಮಾಡತಕ್ಕಂಥದ್ದು ಸೂಕ್ತವಲ್ಲ. ಆದ್ದರಿಂದ ಸದನವನ್ನು ಒಂದು ಒಳ್ಳೆಯ ರೀತಿಯಲ್ಲಿ ನಡೆಸುವಂಥಾದ್ದಕ್ಕೆ ಎಲ್ಲರ ಸಹಕಾರವನ್ನು ಕೋರಲಿಕ್ಕೆ ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಒಳ್ಳೆಯ ಕೆಲಸಗಳು ಆಗಬೇಕು, ಕಾನೂನು ಬದ್ಧವಾಗಿ ಆಗಬೇಕು, ಶಾಸ್ತ್ರೀಯವಾಗಿ ಆಗಬೇಕು ಎನ್ನುವಂತಹ ಭಾವನೆ ಇಟ್ಟುಕೊಂಡೇ ನಾವೆಲ್ಲಾ ಇಲ್ಲಿ ಸದಸ್ಯರಾಗಿದ್ದೇವೆ. ಸರ್ಕಾರಕ್ಕೆ ನಾವು ಎಲ್ಲಾ ರೀತಿಯಲ್ಲಿ ಸಹಕಾರ ಕೊಡುತ್ತೇವೆ, ಅವರು ಬಹಳ ಕೆಲಸಗಳನ್ನು ಮಾಡಬೇಕಾಗಿದೆ, ಮಾಡಲಿ. ನಾವು ಇಲ್ಲಿ ಎತ್ತಿರುವುದು, ಯಾರನ್ನೋ ವಿರೋಧ ಮಾಡುವುದಕ್ಕೆ ಯಾರದೋ ಪರವಾಗಿ ಮಾತನಾಡುವುದಕ್ಕೆ ಈ ವಿಷಯವನ್ನು ಈ ಶಾಸನ ಸಭೆಯಲ್ಲಿ ನಾವಂತೂ ಎತ್ತಿಲ್ಲ. ಇಲ್ಲಿ Article 175,176ದ್ದು ಜಿಜ್ಞಾಸೆಯಾಯಿತು. ಮಾನ್ಯ Governorರವರಿಗೇ legal advice ಕೊಟ್ಟರು. ಎರಡನೇ ಭಾಷಣ ಮಾಡಲಿಕ್ಕಾಗುವುದಿಲ್ಲ, ನೀವು ಸಂದೇಶ ಕಳುಹಿಸಬಹುದು, ನಿಮಗೆ ಯಾವಾಗ ಬೇಕಾದರೂ ಶಾಸನ ಸಭೆಯಲ್ಲಿ ಹೋಗಿ ಕುಳಿತುಕೊಂಡು, ಅವರನ್ನು ಕರೆಸಿ ಮಾತನಾಡಲಿಕ್ಕೆ ಅಧಿಕಾರ ಇದೆ, ಆ Article ಕೆಳಗಡೆ ಶಾಸನ ಸಭೆಗೆ ನೀವು ಎರಡನೆ ಸಲ ಹೋಗಬಹುದು ಎಂದು legal advice ತೆಗೆದುಕೊಂಡು, ಅವರೇ ಅವರ ಭಾಷಣದಲ್ಲಿ ಹೇಳಿ, ನಾನು Article 175(1)ರ ಕೆಳಗೆ ಮಾತ್ರ ನಿಮ್ಮ ಸಭೆಗೆ ಬರುತ್ತಿದ್ದೇನೆ ಎಂದು ಹೇಳಿ, 176ರ ಕೆಳಗೆ ಬರುವಂತಹ ಅಧಿಕಾರ ನನಗಿಲ್ಲ ಎನ್ನುವುದನ್ನು ಅವರು ಒಪ್ಪಿಕೊಂಡು ಬಿಟ್ಟರು. ಆರ್ಟಿಕಲ್ 176ರಲ್ಲಿ ನಾವು ಅವರನ್ನು ಕರೆಯುವಾಗ, 174ರಲ್ಲಿ ನೋಟೀಸ್ ಕೊಡುತ್ತೇವೆ, ಅಂದರೆ ಶಾಸನ ಸಭೆಯನ್ನು ಕರೆದು, ನೀವು ಅವರನ್ನು ದಯಮಾಡಿ ಬನ್ನಿ, ನಮ್ಮ ಶಾಸನಸಭೆಗೆ, ಭಾಷಣ ಮಾಡಿ ಎಂದು. ನಾವು ಕರೆದಾಗ ನಾವು ಅವರಿಗೆ ವಂದನೆ

ಸಲ್ಲಿಸಬೇಕಾದುದು, ಗೌರವ ಕೊಡಬೇಕಾದುದು ಎಲ್ಲವೂ ಸರಿ. ಆರ್ಟಿಕಲ್ 175ರಲ್ಲೇನು ಅವರು ನಮ್ಮನ್ನು ಕರೆದಿದ್ದಾರೆ, ಅವರ ಭಾವನೆಗಳನ್ನು ಹೇಳಲಿಕ್ಕೆ, ಅವರಿಗೆ ತಿಳಿದಿದ್ದನ್ನು ಹೇಳಲಿಕ್ಕೆ for a specific purpose, Article ಹೇಳುವುದು some purpose, Governorಗೆ ಅನಿಸಿದ purposeಗೆ ನಮ್ಮನ್ನು ಕರೆದಿದ್ದಾರೆ, ಅದನ್ನು ಚರ್ಚೆ ಮಾಡಲಿಕ್ಕೆ ನಮ್ಮ ತಕರಾರು ಇಲ್ಲ. ತಾವು ಘನತೆವೆತ್ತ ಅಧ್ಯಕ್ಷರಿದ್ದೀರಿ ಈ ಸಭೆಗೆ, ಯಾವ ವಿಷಯ ಬೇಕಾದರೂ considerationಗೆ ತಾವು ತೆಗೆದುಕೊಳ್ಳಬಹುದು, ಆದರೆ motion move ಮಾಡಿಸುವುದು ಒಂದು ಕೆಟ್ಟ ಸಂಪ್ರದಾಯವಾಗಬಹುದು ಅನ್ನುವುದಷ್ಟೇ ನಮ್ಮ ವಾದ. Motion ಅನ್ನು ಆರ್ಟಿಕಲ್ 176ರ ಕೆಳಗೆ move ಮಾಡಬೇಕು ಎಂದು ತಾವು ನಿಯಮ 20ನ್ನು ಶಾಸನ ಸಭೆಯಲ್ಲಿ ರಚಿಸಿಕೊಂಡು ಬಿಟ್ಟಿದ್ದೀರಿ. ಸ್ವಲ್ಪ ತಮ್ಮನ್ನೂ ಕೇಳಬೇಕು ಸಾರ್. ಆರ್ಟಿಕಲ್ 176ರ ಕೆಳಗೆ ಭಾಷಣ ಆಗಿದ್ದಕ್ಕೆ ತಾವು ಕಾಲ ನಿಗದಿ ಮಾಡಿ ಮೋಷನ್ ಒಬ್ಬರು ಮೂವ್ ಮಾಡಬೇಕು ಮತ್ತು ಒಬ್ಬರು ಸೆಕೆಂಡ್ ಮಾಡಬೇಕು ಎಂದು ರೂಲ್ಸ್ ಮಾಡಿ ಕೊಂಡಿದ್ದೀರಿ. ಅದರಂತೆ ಬೇರೆ ಪ್ರಾವಿಷನ್ ಇಲ್ಲವೆಂದೇ ನಾವು ಭಾವಿಸಿಕೊಳ್ಳಬೇಕು. ತಾವು ನಿನ್ನೆ ಹೇಳಿದಿರಿ, 19ನೇ ತಾರೀಖು ಅವರು ಮಾಡಿರುವ ಭಾಷಣವನ್ನು ನಾನು ನಲ್ಲಿಫೈ ಮಾಡಿದ್ದೇನೆ, ಇನ್‌ಫ್ರಕ್ಚುಯಸ್ ಎಂದು ನಾನು ಟ್ರೀಟ್ ಮಾಡಿದ್ದೇನೆ ಎಂದು ಹೇಳಿದಿರಿ. ನಮ್ಮದು ಯಾವುದೇ ತಕರಾರು ಇಲ್ಲ 19ನೇ ತಾರೀಖು ಯಾವ ಭಾಷಣವನ್ನು ತಾವು ಇಲ್ಲಿ ಓದಿಸಿದಿರಿ, ಆ ಸರ್ಕಾರ ಇವತ್ತು ಎಕ್ಸಿಸ್ಟೆನ್ಸ್‌ನಲ್ಲಿ ಇಲ್ಲ, ಸರ್ಕಾರ ಬಿದ್ದು ಹೋದ ಮೇಲೆ ಆ ಭಾಷಣದ ಬಗ್ಗೆ ಚರ್ಚೆ ಮಾಡಬೇಕೆಂದು ಒತ್ತಾಯ ಮಾಡುವ ಸ್ಥಿತಿಯಲ್ಲಿ ನಾವು ಇಲ್ಲ. 24ನೇ ತಾರೀಖು ಗೌವರ್ನರ್ ಭಾಷಣ ಏನಾಗಿದೆ ಅದರ ಬಗ್ಗೆ ನಮ್ಮದು ಒಂದೇ ಒಂದು ಬೇಡಿಕೆ, ದಯಮಾಡಿ ಅದರ ಮೇಲಿನ ವಂದನಾ ನಿರ್ಣಯವನ್ನು ಇಲ್ಲಿ ತೆಗೆದುಕೊಳ್ಳಬೇಡಿ; ಚರ್ಚೆ ಮಾಡಿಸಿ, ಯಾರಾದರೂ ಮಾತನಾಡಲಿ, ನಾವೂ ಸೇರಿಕೊಂಡು ಅನಧಿಕೃತವಾಗಿ ಗೌವರ್ನರ್‌ಗೆ ವಂದನೆಯನ್ನು ಹೇಳುತ್ತೇವೆ. ವಂದನಾ ನಿರ್ಣಯವೆಂದು ಹೇಳುವುದಿಲ್ಲ. ಗೌವರ್ನರ್‌ಗೆ ನಾವು ವಂದಿಸಲೇಬೇಕು. ಅವರು ಈ ರಾಜ್ಯದ ರಾಜ್ಯಪಾಲರು. ವಂದಾನ ನಿರ್ಣಯವನ್ನು ನೀವು ಸಂಪ್ರದಾಯವಾಗಿ ಪ್ರಾರಂಭ ಮಾಡಿದರೆ ಗವರ್ನರ್ ಯಾವ್ಯಾವತ್ತು ಈ ಸಭೆಗೆ ಬಂದು ಆರ್ಟಿಕಲ್ 175 ಕೆಳಗಡೆ ಭಾಷಣ ಮಾಡುತ್ತಾರೆ, ಅವತ್ತೆಲ್ಲಾ ವಂದನಾ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಗವರ್ನರ್ ಒಂದು ಬಿಲ್ ಪೆಂಡಿಂಗ್ ಇದೆ ಎಂದು ಹೇಳಿ ಇಲ್ಲಿ ಬಂದು ಭಾಷಣ ಮಾಡುತ್ತಾರೆ, ಆಗ ನಾವು ಅವರಿಗೆ ವಂದನಾ ನಿರ್ಣಯವನ್ನು ಸಲ್ಲಿಸಬೇಕಾ? ಗವರ್ನರ್ ಯಾವುದೋ ಕಾವೇರಿ ಟ್ರಿಬ್ಯುನಲ್ ಡಿಸಿಷನ್‌ನಲ್ಲಿ ನೀವು ಮಾಡಿದ ತೀರ್ಮಾನ ಸರಿ ಇಲ್ಲವೆಂದು ನಾಳೆ ಇಲ್ಲಿ ಬಂದು ಹೇಳಬೇಕೆಂದು ಬಯಸಿದರೆ ನಾವು ವಂದನಾ ನಿರ್ಣಯ ಮಾಡಬೇಕಾ? ನಮ್ಮ ಸಂಪ್ರದಾಯಕ್ಕಿಂತ ಹೆಚ್ಚಾಗಿ ನಾವು ಸಂವಿಧಾನವನ್ನು ಗೌರವಿಸಬೇಕಾಗಿದೆ. ತಾವು ಒಂದು ತೀರ್ಮ ಕೊಟ್ಟಿದ್ದೀರಿ. ನಾವು ತಮ್ಮ ತೀರ್ಪನ್ನು ಕ್ವೊಶ್ಚನ್ ಮಾಡುವಷ್ಟು ಧಾರ್ಷ್ಯತನ ತೋರಿಸುವುದಿಲ್ಲ. ಅಪೀಲ್ ಮಾಡಲಿಕ್ಕೆ ನಮಗೆ ಅಧಿಕಾರವಿದೆ. ತಾವು ಸಂವಿಧಾನದ ಪ್ರಾವಿಷನ್‌ಗೆ ವಿರುದ್ಧವಾಗಿ ತೀರ್ಮ ಕೊಟ್ಟುಬಿಟ್ಟಿದ್ದೀರಿ. ದಯಮಾಡಿ ರೀಕನ್‌ಸಿಡರ್ ಮಾಡಿ. ಶಾಸನ ಸಭೆಯ ನಿಯಮಗಳನ್ನು ತಾವು ಬದಗಿಟ್ಟು ತೀರ್ಮ ಕೊಟ್ಟಿದ್ದರೆ ನಾವು ಪ್ರಶ್ನೆ ಮಾಡುತ್ತಿರಲಿಲ್ಲ. 'I have overtaken Rule 20' of the Rules of Procedure ಎಂದು ತಾವು ಹೇಳಿಬಿಟ್ಟಿದ್ದರೆ, ಅಧ್ಯಕ್ಷರು ಹೇಳಿದ್ದಾರೆ ಅವರಿಗೆ ಅಧಿಕಾರ ಇದೆ ಎಂದು ಒಪ್ಪಿಕೊಂಡು

ಬಿಡುತ್ತಿದ್ದೆವು. ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್‌ನ್ನು ತಾವು ಆರ್ಥಿಕತೆ 175ರ ನೋಟೀಸ್‌ನಲ್ಲಿ ಕರೆದಿರುವ ಸಭೆಯನ್ನು ಆರ್ಟಿಕಲ್ 176ರ ಕೆಳಗೆ ಚರ್ಚೆ ಮಾಡಬಹುದು ಎಂದು ತಾವು ಹೇಳಿದ್ದೀರಿ, ಬಹುಶಃ ನನಗೆ ನಾನು ಒಬ್ಬ ವಿದ್ಯಾರ್ಥಿಯಾಗಿ ನನಗನ್ನಿಸುವುದು ಆ ಅಧಿಕಾರವನ್ನು ತಾವು ಚಲಾಯಿಸಬಾರದಾಗಿತ್ತು ಏನೋ ಎಂದು. ಅದು ತಮಗೆ ಬಿಟ್ಟಿದ್ದು. ಸಂವಿಧಾನದ ಅವಕಾಶಗಳನ್ನು ನಾವು ವ್ಯಾಖ್ಯಾನಿಸುವುದು ಸ್ವಲ್ಪ ಕಷ್ಟವಾಗುತ್ತದೆ. ನಿಯಮ 175(1) ರ ಕೆಳಗೆನೇ ನಾನು ಭಾಷಣ ಮಾಡುತ್ತೇನೆಂದು ಗವರ್ನರ್‌ರವರು ಹೇಳಿರುವುದರಿಂದ ದಯಮಾಡಿ ಅದನ್ನು ಚರ್ಚೆಗೆ ಮಾತ್ರ ಸೀಮಿತ ಮಾಡಿ. ಚರ್ಚೆ ಆಗಲಿ, ನಾವು ಯಾರೂ ಚರ್ಚೆ ಬೇಡ ಎಂದು ಯಾವ ಕ್ಷಣದಲ್ಲಿಯೂ ಹೇಳಲಿಲ್ಲ. ವಂದನಾ ನಿರ್ಣಯಗಳನ್ನು ಗವರ್ನರ್‌ಗೆ ತಲುಪಿಸುತ್ತೇವೆ ಎಂದು ಹೇಳುವುದನ್ನು ನಿಲ್ಲಿಸಿಬಿಡಿ. ಇವತ್ತೇ ಕೊನೆ ಅಲ್ಲ. ನಾಳೆ ಇದಕ್ಕಿಂತ ಗಂಡಾಂತರಕಾರಿ ಸಮಯದಲ್ಲಿ ಗವರ್ನರ್ ಇಲ್ಲಿಗೆ ಬರಬಹುದು. ಹಾಗೆ ಅವರು ಬಂದಾಗಲೆಲ್ಲಾ ನಾವು ಇಲ್ಲಿ ಓಟ್ ಆಫ್ ಥ್ಯಾಂಕ್ಸ್ ಮೋಷನ್ ಮಾಡುವುದಕ್ಕೆ ಬರುವುದಿಲ್ಲ. ಮೋಷನ್ ಮೂವ್ ಮಾಡುವುದನ್ನು ಬಿಟ್ಟು ನೀವು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಹೇಳಿ, ತಮ್ಮ ತೀರ್ಪನ್ನು ರೀಕನ್‌ಸಿಡರ್ ಮಾಡಬೇಕೆಂದು ಹೇಳಿ ನಾನು ಮನವಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರತಿ ಪಕ್ಷದ ನಮ್ಮ ನಾಯಕರು ಬಹಳ ಸ್ಪಷ್ಟವಾಗಿ ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈಗಾಗಲೇ ವಂದನಾ ನಿರ್ಣಯವನ್ನು ಮೂವ್ ಮಾಡಿ ಸ್ಪೀಕರ್ ರೂಲಿಂಗ್ ಕೊಟ್ಟಿದ್ದಾರೆ. ಅದನ್ನು ಮರು ಪರಿಶೀಲನೆ ಮಾಡಿ ಎಂದು ತಾವು ಹೇಳುತ್ತಿದ್ದೀರಿ. ಕೇಳುವುದಕ್ಕೆ ನಿಮಗೆ ಅಧಿಕಾರ ಇದೆ. ನನ್ನ ಪ್ರಶ್ನೆ ಇಷ್ಟೆ. ಎರಡು–ಮೂರು ಪ್ರಶ್ನೆ ನಮ್ಮ ಮುಂದೆ ಉದ್ಭವವಾಗಿದೆ. ಜಂಟಿ ಅಧಿವೇಶನವನ್ನು ಆರ್ಟಿಕಲ್ 176(1)ರ ಅಡಿಯಲ್ಲಿ ಏಕೆ ಕರೆಯಲಿಲ್ಲ ಎಂದು ನನಗೆ ಗೊತ್ತಿರುವ ಪ್ರಕಾರ ಆರ್ಟಿಕಲ್ 176(1) ರ ಅಡಿಯಲ್ಲಿ ಈಗಾಗಲೇ ಒಮ್ಮೆ ವರ್ಷದ ಪ್ರಾರಂಭದಲ್ಲಿಯೇ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿರುವುದರಿಂದ . . . ನಾನು ಪೂರ್ತಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರದ್ದು ಒಂದು ಕೇಳಿ ಉತ್ತರ ಕೊಟ್ಟರೆ ಸರಿ ಹೋಗುತ್ತದೆ ಎಂದು ನಾನು ಹೇಳಿದ್ದು.

ಶ್ರೀ ಕೆ. ಶ್ರೀನಿವಾಸಗೌಡ: ನೀವು ಇನ್ನೂ ವಿರೋಧ ಪಕ್ಷದಲ್ಲಿ ಇದ್ದ ಹಾಗೆ ಮಾತನಾಡಬೇಡಿ. ಮಾನ್ಯ ಉಪ ಮುಖ್ಯಮಂತ್ರಿಗಳು ಸ್ವಲ್ಪ ಸಂಯಮವನ್ನು ತೋರಿಸಬೇಕಾಗುತ್ತದೆ. ಅವರು, ನೀವು ಈಲ್ಡ್ ಆಗಿ ಎಂದರೆ ಈಲ್ಡ್ ಆಗುವುದಿಲ್ಲ ಎಂದು ತಾವು ಮೊಂಡತನ ಮಾಡಬಾರದು. ಕೋಪ–ತಾಪ ಸ್ವಲ್ಪ ಕಡಿಮೆ ಮಾಡಿಕೊಳ್ಳಿ. ಕೋಪ ತಾಪ ಸ್ವಲ್ಪ ಕಡಿಮೆ ಮಾಡಿಕೊಂಡರೆ ಈ ಮನೆಗೆ ಕೂಡ ಉಪಯೋಗವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ವಿಶೇಷ ಸನ್ನಿವೇಶದಲ್ಲಿ ಆರ್ಥಿಕತೆ 175(1)ರ ಅಡಿಯಲ್ಲಿ ಅಧಿವೇಶನವನ್ನು ಕರೆಯಬೇಕಾಗಿತ್ತು ಎಂದು ಬಹಳ ಸ್ಪಷ್ಟವಾಗಿ ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಪ್ರಶ್ನೆ ಏನು? ಆರ್ಟಿಕಲ್ 175(1)ರಲ್ಲಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದರೆ ಅವರಿಗೆ ವಂದನೆ ಸಲ್ಲಿಸುವ ಅವಕಾಶ ಇಲ್ಲ ಎಂಬುದು ನಿಮ್ಮ ತರ್ಕ. ಆರ್ಥಿಕತೆ 175(1)ರ ಪ್ರಕಾರ ಮಾನ್ಯ ರಾಜ್ಯಪಾಲರಿಗೆ ವಂದನೆ ಸಲ್ಲಿಸಬಾರದು ಎಂದು ಯಾವತ್ತೂ ಯಾವ

ರೂಲ್‌ನಲ್ಲಿಯೂ ಹೇಳಲಿಲ್ಲ. ಸನ್ಮಾನ್ಯ ಸಭಾಧ್ಯಕ್ಷರು ರೂಲ್ 25ರ ಅಡಿಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಅವಕಾಶ ನೀಡಿದ್ದಾರೆ. ಅದರಂತೆ ಅವರು ಅವಕಾಶ ಕೊಟ್ಟ ನಂತರ ರಾಜ್ಯಪಾಲರ ಭಾಷಣದ ಮೇಲೆ ಚರ್ಚಿಸಲು ಮೋಷನ್ ಮೂವ್ ಮಾಡಿ ಆಗಿದೆ, ಒಂದು ತಿಂಗಳ ಅಂತರದಲ್ಲಿ ಮಾನ್ಯ ರಾಜ್ಯಪಾಲರು ಅದೇ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಎರಡನೇ ಬಾರಿ ಭಾಷಣ ಮಾಡುವುದು ಸರಿಯೋ ಎಂದು ಪ್ರಶ್ನೆ ಉದ್ಭವವಾಗಿದೆ. ದಿನಾಂಕ 19.1.06 ರಂದು ಮಾನ್ಯ ರಾಜ್ಯಪಾಲರು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಚರ್ಚೆ ನಡೆಯದೆ ಇದ್ದುದ್ದರಿಂದ ಮತ್ತು ಅವರಿಗೆ ವಂದನೆ ಸಲ್ಲಿಸದೇ ಇದ್ದುದ್ದರಿಂದ ಹಾಗೂ ಆ ಸಂದರ್ಭದಲ್ಲಿ ಇದ್ದ ಸರ್ಕಾರ ಬಿದ್ದು ಹೋದುದರಿಂದ ಈಗ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು ಮತ್ತು ಆ ಬಗ್ಗೆ ಚರ್ಚಿಸಲು ಹಾಗೂ ಅವರಿಗೆ ವಂದನೆ ಸಲ್ಲಿಸಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿದೆ. ಅದರಂತೆ ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ರಾಜ್ಯಪಾಲರು ಹಿಂದೆ ಮಾಡಿದ ಭಾಷಣಗಳ ಮೇಲೆ ಚರ್ಚೆ ಮಾಡಿ ವಂದನೆ ಸಲ್ಲಿಸಬಹುದಾಗಿತ್ತು ಎಂಬ ಪ್ರಶ್ನೆ. ಮಾನ್ಯ ರಾಜ್ಯಪಾಲರು ಹಿಂದೆ ಮಾಡಿದ ಭಾಷಣ ಹಿಂದಿನ ಸರ್ಕಾರದ ಧ್ಯೇಯೋದ್ದೇಶಗಳನ್ನು ಬಿಂಬಿಸುತ್ತದೆ. ಆದರೆ ಈಗ ಆ ಸರ್ಕಾರ ಇಲ್ಲದೇ ಇರುವುದರಿಂದ ಹೊಸ ಸರ್ಕಾರದ ಧ್ಯೇಯೋದ್ದೇಶಗಳನ್ನು ಹೇಳಲು ಅವರು ಭಾಷಣ ಮಾಡುವ ಅವಶ್ಯಕತೆ ಇತ್ತು. ಅದಕ್ಕೋಸ್ಕರ ನಾವು ಮಾಡಿಸಿದ್ದೇವೆ. ರಾಜ್ಯಪಾಲರ ಈ ಭಾಷಣ ಸಂವಿಧಾನ ಬಾಹಿರ ಅಲ್ಲವೇ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಖಂಡಿತ ಇಲ್ಲ ಆರ್ಟಿಕಲ್ 175(1) ರಲ್ಲಿ ರಾಜ್ಯಪಾಲರು ಸಚಿವ ಸಂಪುಟದ ಸಲಹೆಯನ್ನು ಪಾಲನೆ ಮಾಡಬೇಕಾಗುತ್ತದೆ. ಆದ್ದರಿಂದ ಅವರು ಸಂವಿಧಾನ ನೀಡಿದ ಅವಕಾಶವನ್ನು ಎತ್ತಿ ಹಿಡಿಯಬೇಕಾಗುತ್ತದೆ. ಆ ಕೆಲಸವನ್ನು ಅವರು ಮಾಡಿದ್ದಾರೆ. ಇದು ಒಂದು ಕೆಟ್ಟ ಸಂಪ್ರದಾಯವಾಗುತ್ತದೆ ಎನ್ನುವ ಮಾತನ್ನು ಅವರು ಎತ್ತಿದ್ದಾರೆ. ಹಿಂದೆ ಬೇರೆ ಬೇರೆ ರಾಜ್ಯಗಳಲ್ಲಿ ಇಂತಹ ವಿಶೇಷ ಸಂದರ್ಭಗಳಲ್ಲಿ ರಾಜ್ಯಪಾಲರು ಎರಡನೇ ಬಾರಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಉದಾಹರಣೆಗಳು ಇವೆ. ಪಂಜಾಬ್, ಉತ್ತರ ಪ್ರದೇಶ ಮತ್ತು ಗುಜರಾತ್ ಸರ್ಕಾರಗಳು ಬದಲಾವಣೆ ಆದಾಗ ಈ ರೀತಿ ರಾಜ್ಯಪಾಲರು ಭಾಷಣ ಮಾಡಿದ ಉದಾಹರಣೆಗಳು ಇವೆ. ಅದಕ್ಕಾಗಿ ಪ್ರತಿ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದು, ಈಗಲಾದರೂ ರಾಜ್ಯಪಾಲರ ಭಾಷಣ ಬಗ್ಗೆ ಮೋಷನ್ ಮೂವ್ ಮಾಡಿ ಚರ್ಚೆ ಪ್ರಾರಂಭ ಆಗುವುದಕ್ಕೆ ಅವಕಾಶ ಕೊಡಿ. ದಯಮಾಡಿ ಸುಗಮವಾಗಿ ಚರ್ಚೆ ಮಾಡುವುದಕ್ಕೆ ಪ್ರತಿ ಪಕ್ಷದ ನಾಯಕರು ಆ ಕಡೆ ಕುಳಿತಿರತಕ್ಕಂತಹವರು ಅವಕಾಶ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ದಿವಸ ವಿರೋಧ ಪಕ್ಷ ಮತ್ತು ಈ ಸದನದ ಸದಸ್ಯರ ಸಹಕಾರವನ್ನು ರಾಜ್ಯದ ಅಭಿವೃದ್ಧಿ ಕೆಲಸಗಳಿಗೋಸ್ಕರ ಚರ್ಚೆ ಮಾಡೋಣ, ಅನೇಕ ಸಮಸ್ಯೆಗಳು ಇವೆ, ಎನ್ನತಕ್ಕಂತಹ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಖಂಡಿತ ಆ ವಿಷಯದಲ್ಲಿ ನಮ್ಮೆಲ್ಲರ ಸಹಕಾರ ಇದೆ. ನಾವು ಕಳೆದ ಎರಡು ದಿವಸಗಳಿಂದ ಎತ್ತಿರತಕ್ಕಂತಹ ವಿಚಾರ ಸರ್ಕಾರದ ಜೊತೆಯಲ್ಲಿ ಸಂಘರ್ಷ ಅಲ್ಲ. ಸಂಘರ್ಷ

ಮಾಡತಕ್ಕಂತಹ ವಿಚಾರದಲ್ಲಿ ಸಂಘರ್ಷ ಮಾಡುತ್ತೇವೆ. ಆದರೆ ಇವತ್ತು ನಮ್ಮ ಮುಂದಿರತಕ್ಕಂಥದ್ದು ತಾವು ಕೊಟ್ಟಿರತಕ್ಕಂತಹ ತೀರ್ಪು ಏನು ಇದೆ, ಆ ತೀರ್ಪು ಕೊನೆಯ ತೀರ್ಪು ಎನ್ನುವುದನ್ನು ನಾವೆಲ್ಲರೂ ಸಹ ಒಪ್ಪುತ್ತೇವೆ. ಆದರೆ ಆ ತೀರ್ಪು ಏನಿದೆ ಅದನ್ನು ಮತ್ತೆ ಪುನರ್ ಪರಿಶೀಲನೆ ಮಾಡಿ ಎಂದು ಹೇಳತಕ್ಕಂತಹ ಹಕ್ಕು ಎಂದು ನಾವು ಹೇಳುವುದಿಲ್ಲ. ನಮಗೆ ಆ ಕೋರಿಕೆಯ ಹಕ್ಕು ಇದೆ ಎಂದು ನಾನು ತಿಳಿದಿದ್ದೇನೆ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ, ಮಾನ್ಯ ರಾಜ್ಯಪಾಲರು 18ನೇ ತಾರೀಖು ಜಾತ್ಯಾತೀತ ಜನತಾದಳದ ಮತ್ತು ಭಾರತೀಯ ಜನತಾ ಪಾರ್ಟಿ ಶಾಸಕರುಗಳು ಏನು ನಮಗೆ ಬಹುಮತ ಇದೆ, ಅದಕ್ಕೋಸ್ಕರ ಇವತ್ತಿನ ಶ್ರೀ ಧರ್ಮಸಿಂಗ್‌ರವರ ಸರ್ಕಾರವನ್ನು ಪತನ ಮಾಡಿ, ವಿಸರ್ಜನೆ ಮಾಡಿ ನಮಗೆ ಅವಕಾಶ ಕೊಡಿ ಎಂದು ಕೇಳಿದರು. ಆ ಸಂದರ್ಭದಲ್ಲಿ ಮಾನ್ಯ ರಾಜ್ಯಪಾಲರು ಶಾಸಕರ ಮನವಿ ಮೇರೆಗೆ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ಸಂವಿಧಾನ ತಜ್ಞರನ್ನು ಕರೆಸಿದರು, ಕಾನೂನು ತಜ್ಞರನ್ನು ಕರೆಸಿದರು. ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಂತಹ ಆ ಸಂದರ್ಭದಲ್ಲಿ ಅವರ ಸರ್ಕಾರವನ್ನು ವಿಸರ್ಜನೆ ಮಾಡಿದಂಥದ್ದು ಅಕ್ರಮ ಎನ್ನತಕ್ಕಂತಹ ಮಾತನ್ನು ಈ ರಾಷ್ಟ್ರದ ಉಚ್ಚ ನ್ಯಾಯಾಲಯ ಹೇಳಿದ್ದರ ತೀರ್ಪಿನ ಹಿನ್ನೆಲೆಯಲ್ಲಿ ಮಾನ್ಯ ರಾಜ್ಯಪಾಲರು ಮಾನ್ಯ ಧರ್ಮಸಿಂಗ್‌ರವರ ಸರ್ಕಾರಕ್ಕೆ ಬಹುಮತ ಇತ್ತೋ ಇರಲಿಲ್ಲವೋ ಆ ಪ್ರಶ್ನೆ ಅನೇಕ ಸಂದರ್ಭಗಳಲ್ಲಿ ಆಡಳಿತ ಪಕ್ಷದ ಮುಖಂಡರು ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನು ಇವತ್ತು ಮಾನ್ಯ ರಾಜ್ಯಪಾಲರನ್ನು ಮೆಚ್ಚುತ್ತೇನೆ. ಮಾನ್ಯ ರಾಜ್ಯಪಾಲರು ಸಂವಿಧಾನಬದ್ಧವಾಗಿ, ಕಾನೂನು ಬದ್ಧವಾಗಿ ಅವತ್ತು ಮುಖ್ಯಮಂತ್ರಿಗಳಾಗಿದ್ದ ಧರ್ಮಸಿಂಗ್‌ರವರಿಗೆ 10 ದಿವಸಗಳ ಅವಕಾಶವನ್ನು ಸಹಿತ ಕೊಟ್ಟು ನೀವು ಬಹುಮತ ಸಾಬೀತು ಮಾಡಿ ಎಂದು ಹೇಳಿದರು. ಈಗ ನೈತಿಕವೋ ಅನೈತಿಕವೋ ಚುನಾವಣೆ ಘೋಷಣೆ ಏನು ಅದನ್ನೆಲ್ಲಾ .ಆ ಮೇಲೆ ಬೇರೆ ಸಂದರ್ಭಗಳಲ್ಲಿ ಮಾತನಾಡೋಣ. ಅಂತೂ ಸರ್ಕಾರ ರಚನೆಯಾಗಿದೆ. ಇವತ್ತು ಕುಮಾರಸ್ವಾಮಿಯವರ ನಾಯಕತ್ವದಲ್ಲಿ ಇರತಕ್ಕಂತಹ ಈ ಸರ್ಕಾರಕ್ಕೆ ಬಹುಮತ ಇಲ್ಲವೆಂದು ನಾವು ಯಾರೂ ಸಹಿತ ಹೇಳುವುದಕ್ಕೆ ಹೋಗುವುದಿಲ್ಲ. ಬಹುಮತ ಸಾಬೀತು ಮಾಡಿದ್ದಾರೆ. ಬಹುಮತಕ್ಕಿಂತ ಹೆಚ್ಚಿನ ಮತವನ್ನು ತಾವು ಗಳಿಸಿದ್ದೀರಿ. ಅದರ ಜೊತೆಗೆ ತಾವೂ ಸಹ ತಮ್ಮ ಸರ್ಕಾರದ ವಿವೇಚನೆ ಏನು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೀರಿ, ರಾಜ್ಯದ ಜನತೆಗೆ ಈ ವೇದಿಕೆ ಮೂಲಕ ಹೇಳತಕ್ಕಂತಹ ಹಕ್ಕು ಸಹಿತ ತಮಗೆ ಇದೆ. ಅದನ್ನು ನಾವು ಟೀಕೆ ಮಾಡುವುದಕ್ಕೆ ಬಯಸುವುದಿಲ್ಲ. ಆದರೆ ನಾವು ಕೇಳುವುದು ಒಂದೇ, ಮಾನ್ಯ ರಾಜ್ಯಪಾಲರಿಗೂ ಸಹಿತ ಹಕ್ಕು ಇದೆ. ಮಾನ್ಯ ರಾಜ್ಯಪಾಲರು ವಂದನಾ ನಿರ್ಣಯವನ್ನು ಬಯಸಿದ್ದರೆ, ಅವರ ಪ್ರಸ್ತಾವಿಕ ಭಾಷಣದಲ್ಲಿ ಮಾನ್ಯ ಮಾಧುಸ್ವಾಮಿಯವರು ಒತ್ತಿ ಒತ್ತಿ ಈ ಮಾತನ್ನು ಪ್ರಾರಂಭದ ದಿನದಿಂದ ಹೇಳುತ್ತಿದ್ದಾರೆ. ಅವರು ಹೇಳಿರತಕ್ಕಂಥದ್ದು, ಆ ನಮ್ಮ ಸಂವಿಧಾನದ ವಿಶೇಷವಾದ ಒಂದು ಪರಿಚ್ಛೇದವನ್ನು ಉದಾಹರಣೆ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ನಾರ್ಮಲ್ ಆಗಿ ರಾಜ್ಯಪಾಲರ ಭಾಷಣ ಕಳೆದ 50 ವರ್ಷಗಳಿಂದ ನಡೆದಿದೆ. ಈ ಘನವಾದ ಅಧಿವೇಶನದಲ್ಲಿ ಮಾತನಾಡಿದ್ದಾರೆ. ಯಾವತ್ತೂ ಸಹಿತ ಯಾವ ರಾಜ್ಯಪಾಲರೂ ಸಹಿತ ಆ ರೀತಿಯ ವಿಶೇಷವಾದ ಒಂದು ಕಂಡಿಕೆಯನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ಒಂದು ವಿಶೇಷವಾದ ಪರಿಸ್ಥಿತಿಯಲ್ಲಿ ತಾವೂ ಸಹಿತ ಸಿಕ್ಕಿ ಹಾಕಿಕೊಂಡಿದ್ದೀರಿ. ತಮ್ಮ ಒಂದು ಎಂಬರಾಸ್‌ಮೆಂಟ್ ಏನು ಇದೆ, ಅದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ತಾವು ಆ ಪೀಠದಲ್ಲಿ ಕುಳಿತಿರುವವರಿಗೆ ಸಹಿತ ತಾವು ಕೊಡತಕ್ಕಂತಹ ತೀರ್ಮಾನಗಳು ದೇಶದ 27 ವಿಧಾನ ಸಭೆಗಳಿಗೆ ಉದಾಹರಣೆಯಾಗುತ್ತದೆ.

ಇನ್ನು ಮುಂದೆ ಈ ರೀತಿ ಸರ್ಕಾರಗಳು ಪತನವಾಗತಕ್ಕಂಥದ್ದು, ರಚನೆ ಆಗತಕ್ಕಂಥದ್ದು, ಇದು ಎರಡು ತಿಂಗಳೋ, ಮೂರು ತಿಂಗಳೋ, ಆರು ತಿಂಗಳೋ ಎನ್ನತಕ್ಕಂಥ ಸಂದರ್ಭ ಬಂದುಬಿಡುತ್ತದೆ. ನಮ್ಮ ರಾಜ್ಯದಲ್ಲಿಯೇ ಯಾವತ್ತೂ ಕೂಡ ಕೇವಲ 18 ತಿಂಗಳುಗಳಲ್ಲಿಯೇ ಸರ್ಕಾರ ಹೋಗಿ ಅದೇ ವಿಧಾನಸಭೆಯಲ್ಲಿ ಸರ್ಕಾರ ರಚನೆಯಾಗಿರತಕ್ಕಂಥ ಉದಾಹರಣೆ ಇಲ್ಲ. ಗೋವಾದಲ್ಲಿ ಮಾತ್ರ ಆಗುತ್ತಿತ್ತು ಎಂದು ನಾವು ಕೇಳಿದ್ದೆವು, ಬಿಹಾರದಲ್ಲಿ ಮಾತ್ರ ಆಗುತ್ತಿತ್ತು ಎಂದು ನಾವು ಕೇಳಿದ್ದೆವು. ಈಗ ಇಲ್ಲೂ ಸಹಿತ ಆಗಿದೆ. ಆದುದರಿಂದ ಇನ್ನೊಂದು ರಾಜ್ಯಪಾಲರ ಭಾಷಣವನ್ನು ತಾವು ಮಾಡಿಸುವುದಕ್ಕೆ ಆಗುತ್ತದೆಯೇ? ತಾವು ಎರಡೂ ಕಡೆಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ, ತಾವು ಅವೇಶಕ್ಕೆ ಒಳಗಾಗದೆ ನನ್ನ ಅಭಿಪ್ರಾಯದಲ್ಲಿ ಕಾನೂನು ಪಂಡಿತರನ್ನು ತಾವೂ ಸಹಿತ ಕರೆಸಿಕೊಳ್ಳಿ, ತಜ್ಞರನ್ನು ಕರೆಸಿ, ಸಂವಿಧಾನ ತಜ್ಞರನ್ನು ಕರೆಸಿ, ನಾವೆಲ್ಲರೂ ಸಂಪೂರ್ಣವಾಗಿ ಸಹಕಾರವನ್ನು ಕೊಡುತ್ತೇವೆ. ತಾವು ಎರಡು ಗಂಟೆಯೋ, ಮೂರು ಗಂಟೆಯೋ ಆಡಳಿತ ಪಕ್ಷದವರಿಗೆ ಅಥವಾ ವಿರೋಧ ಪಕ್ಷದವರಿಗೆ ಸಮಯವನ್ನು ನಿಗದಿ ಮಾಡಿ. ನಾವು ಹೇಳತಕ್ಕಂಥ ವಿಚಾರಗಳನ್ನು ಹೇಳುತ್ತೇವೆ. ನಿರ್ಣಯವನ್ನು ಮಂಡಿಸಿರತಕ್ಕಂಥ ಘನವೆತ್ತ ಸದಸ್ಯರೂ ಕೂಡ ಅವರ ಭಾಷಣಗಳನ್ನು ಮಾಡಲಿ. ಆದರೆ ನಾನು ಹೇಳತಕ್ಕಂಥದ್ದು ತಾವು ಕೊಟ್ಟಿರತಕ್ಕಂಥ ತೀರ್ಮ ಏನಿದೆ ಅದಕ್ಕೆ ತಲೆಬಾಗುವುದು ಒಂದು ವಿಚಾರ, ಆದರೆ ಅದನ್ನು ಪುನರ್‌ಪರಿಶೀಲನೆಯನ್ನು ಮಾಡಬೇಕು. ಏಕೆಂದರೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಿರತಕ್ಕಂಥ ಒಂದು ತೀರ್ಪಾಗುತ್ತದೆ. ಇಂಥ ಸನ್ನಿವೇಶಗಳು ಇನ್ನು ಮುಂದೆ ಬೇಗ ಬೇಗ, ಈ ವಿಧಾನಸಭೆಯಲ್ಲಿಯೇ ಬರಬಹುದು, ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ನಾವೂ ಕೂಡ, ಸರ್ಕಾರ ಐದು ವರ್ಷ ಇರುತ್ತದೆ, ಐದು ವರ್ಷ ಇರುತ್ತದೆ ಎಂದು ಹೇಳುತ್ತಿದ್ದೆವು. ಆದರೆ 18 ತಿಂಗಳುಗಳಲ್ಲಿಯೇ ಹೊರಟುಹೋಯಿತು. ಈಗಲೂ ಅದೇ ತರಹ ಆಡಳಿತ ಪಕ್ಷದವರು ಹೇಳುತ್ತಿದ್ದಾರೆ, ಇನ್ನೂ ನಲವತ್ತು ತಿಂಗಳು ಇರುತ್ತದೆ, ನಲವತ್ತು ತಿಂಗಳು ಇರುತ್ತದೆ ಎಂದು ಹೇಳುತ್ತಿದ್ದಾರೆ; ಹೇಳಲಿ. ಅವರು ಚೆನ್ನಾಗಿ ಕೆಲಸ ಮಾಡಬೇಕು. ಏನೇನು ಘೋಷಣೆಗಳನ್ನು ಮಾಡಿದ್ದಾರೆ ಅದೆಲ್ಲವನ್ನೂ ಮಾಡಿದರೆ ನಾವು ಅವರಿಗೆಲ್ಲಾ ಶಹಭಾಸ್‌ಗಿರಿಯನ್ನು ಕೊಡೋಣ. ಆದರೆ ಯಾವಾಗ ಹೋಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಆದರೆ ಇಲ್ಲಿ ಮತ್ತೊಂದು ಕೆಟ್ಟ ಸಂಪ್ರದಾಯ ಪ್ರಾರಂಭವಾಗಬಾರದು. ಆದ್ದರಿಂದ ದಯವಿಟ್ಟು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಇದನ್ನು ಪುನರ್ ಪರಿಶೀಲನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ...

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿರುವುದನ್ನು ಬಿಟ್ಟು ಮತ್ತೇನಾದರೂ ಹೇಳುವುದು ಇದೆಯೇ ಎಂದು ಹೇಳಿ. ಎಲ್ಲರೂ ಹೇಳಿದ್ದೇ ಹೇಳುತ್ತಿದ್ದಾರೆ. ಹೊಸ ವಿಚಾರಗಳು ಬರುತ್ತಿಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮೊನ್ನೆಯಿಂದಲೂ ಕೂಡ ಇದೇ ಚರ್ವಿತ ಚರ್ವಣ ಆಗುತ್ತಿದೆ. ಇದೇ ಶಬ್ದಗಳು. ಇಂಥದ್ದಕ್ಕೆ ಮತ್ತೆ ಮತ್ತೆ ಅವಕಾಶ ಕೊಡಬೇಕೆ? ಹೇಳಿ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಾಗ ಈ ರಾಜ್ಯದ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ಸದನದ ಮೂಲಕ ತರಬೇಕಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬೇಕು. ಅದರ ಬದಲು ಚರ್ವಿತ ಚರ್ವಣದಂತೆ ಹೇಳಿದ್ದನ್ನೇ ಹೇಳುವುದು, ಹೇಳಿದ್ದನ್ನೇ ಹೇಳುತ್ತಾ ಹೋದರೆ

ಅದಕ್ಕೇನಾದರೂ ಅರ್ಥವಿದೆಯೇ? ಅಧ್ಯಕ್ಷರಾದ ತಾವು ಈಗಾಗಲೇ ತೀರ್ಪನ್ನು ಕೊಟ್ಟಿದ್ದೀರಿ. ಆ ತೀರ್ಪಿಗೆ ಸಭೆ ಬದ್ಧವಾಗಿರತಕ್ಕಂಥದ್ದು ಅಗತ್ಯವಿದೆ. ತಮ್ಮ ತೀರ್ಪನ್ನೇ ಪ್ರಶ್ನೆ ಮಾಡತಕ್ಕಂಥದ್ದು. . . . ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ಇತಿಹಾಸವನ್ನೇ ಸೃಷ್ಟಿ ಮಾಡುತ್ತಿದ್ದಾರೆ ಇವರು. ಮಾನ್ಯ ರಾಜ್ಯಪಾಲರ ಬಗ್ಗೆಯೂ ಗೌರವವಿಲ್ಲ, ತಮ್ಮ ಬಗ್ಗೆಯೂ ಗೌರವವಿಲ್ಲ.

(ಗೊಂದಲ)

ಅಧ್ಯಕ್ಷರು: ಹೀಗೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ರಾಮಸ್ವಾಮಿಯವರೆ, ತಾವು ಕುಳಿತುಕೊಳ್ಳಿ. ನಾನು ಈಗ ಮಾನ್ಯ ಸಿದ್ದರಾಮಯ್ಯನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಸಿದ್ದರಾಮಯ್ಯನವರೆ, ಎರಡು ನಿಮಿಷದಲ್ಲಿ ತಮ್ಮ ಅಭಿಪ್ರಾಯ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವುದಕ್ಕೋಸ್ಕರವಾಗಿ ನಾನು ಇಲ್ಲಿ ಬಂದುನಿಂತಿಲ್ಲ. ನಮಗೆ ಸದನದ ಸಮಯ ಹಾಳುಮಾಡಬೇಕೆಂಬ ಉದ್ದೇಶವೂ ಕೂಡ ಇಲ್ಲ. ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಪಡಿಸಬೇಕೆಂಬ ಉದ್ದೇಶವೂ ನಮಗೆ ಇಲ್ಲ. ಅಭಿವೃದ್ಧಿ ಕೆಲಸಗಳಿಗೆ ಎಷ್ಟು ಸಹಕಾರ ಕೊಡಬೇಕೋ ಅಷ್ಟು ಸಹಕಾರವನ್ನು ನಾವು ಕೊಡುತ್ತೇವೆ. ಬಹಳ ಒಳ್ಳೆಯ ಅಭಿವೃದ್ಧಿ ಕೆಲಸಗಳಿಗೆ ನಮ್ಮ ಸಹಕಾರ ಇದ್ದೇ ಇರುತ್ತದೆ. ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಮ್ಮೆಲ್ಲಾ ಸದಸ್ಯರ ಸಂಪೂರ್ಣ ಬೆಂಬಲ ಇದ್ದೇ ಇದೆ. ಇದನ್ನು ಅಡ್ಡಿಪಡಿಸುವುದಕ್ಕೆ ಹೋಗುವುದೇ ಇಲ್ಲ. ಆದರೆ ಈಗ ಇಲ್ಲಿ ಬಂದಿರತಕ್ಕಂಥ ವಿಚಾರ, ಇದು ರಾಜ್ಯಾಂಗದ ಸಮಸ್ಯೆ ಆಗಿರುವುದರಿಂದ, it is a constitutional matter. ಹಾಗಾಗಿ ಈ ಬಗ್ಗೆ ಚರ್ಚೆ ಆಗಬೇಕಾಗಿದೆಯೆಂದು ತಮ್ಮಲ್ಲಿ ನಾವು ಮನವಿ ಮಾಡುತ್ತಿದ್ದೇವೆ. ನಾವು ತಮ್ಮ ತೀರ್ಪನ್ನು ಪ್ರಶ್ನೆ ಮಾಡುತ್ತಿದ್ದೇವೆಂದು ತಾವು ಭಾವಿಸಿ ಕೊಳ್ಳಬಾರದು. ಆದರೆ ತಮ್ಮ ತೀರ್ಪಿನ ಬಗ್ಗೆ ನಾವು ಮತ್ತೆ ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಮನವಿ ಮಾಡುತ್ತಿದ್ದೇವೆ. ಈ ರಾಜ್ಯದಲ್ಲಿ ರಾಜ್ಯಾಂಗಕ್ಕೆ ವಿರುದ್ಧವಾದಂಥ ಒಂದು ಪದ್ಧತಿಯಾಗಬಾರದು, ಸಂಪ್ರದಾಯವಾಗಬಾರದು ಎನ್ನತಕ್ಕಂಥ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇವೆಯೇ ಹೊರತು ನಿಮ್ಮನ್ನು ಪ್ರಶ್ನೆ ಮಾಡಬೇಕೆನ್ನುವ ವಿಷಯ ನಮ್ಮಲ್ಲಿ ಇಲ್ಲವೇ ಇಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾವು ಏಕೆ ಇಷ್ಟೆಲ್ಲಾ ಕಳಕಳಿಯಿಂದ ಪ್ರಸ್ತಾಪ ಮಾಡುತ್ತಿದ್ದೇವೆಂದರೆ ತಾವು ಒಳಗಡೆ ಸಭೆ ಕರೆದಾಗಲೂ ಕೂಡ ಬಂದು ಹೇಳಿದ್ದೇವೆ. ನಮ್ಮ ಅಭಿಪ್ರಾಯಗಳನ್ನು ಅಲ್ಲಿ ಕೂಡ ಹೇಳಿದ್ದೇವೆ. ತಮ್ಮ ಗಮನಕ್ಕೆ ಎಷ್ಟು ತರುವುದಕ್ಕೆ ಸಾಧ್ಯವಾಗುತ್ತದೋ ಅವೆಲ್ಲವನ್ನೂ ಕೂಡ ಹೇಳಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ವಿಶೇಷ ಪರಿಸ್ಥಿತಿ ನಿರ್ಮಾಣ ಆಗಿರುವುದರಿಂದಲೇ ಮಾನ್ಯ ರಾಜ್ಯಪಾಲರು 24ನೇಯ ತಾರೀಖು ಮಾಡತಕ್ಕ ಭಾಷಣವನ್ನು ಆರ್ಟಿಕಲ್ 175(1)ರ ಪ್ರಕಾರ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅವರು ಗೊಂದಲ ನಿವಾರಣೆ ಮಾಡಬೇಕು ಎನ್ನುವುದಕ್ಕೋಸ್ಕರವೇ ಹಾಗೆ ಹೇಳಿರುವುದು. ಗೊಂದಲ ಇಲ್ಲದಿದ್ದರೆ ನೇರವಾಗಿ ಮಾನ್ಯ ರಾಜ್ಯಪಾಲರು ಆರ್ಟಿಕಲ್ 176ರ ಅಡಿಯಲ್ಲಿ ಭಾಷಣ ಮಾಡುತ್ತಿದ್ದೇನೆ ಎಂದು ಹೇಳಿಬಿಡುತ್ತಿದ್ದರು. ಆರ್ಟಿಕಲ್ 175(1)ರಲ್ಲಿ ಮಾಡಿರತಕ್ಕಂಥದ್ದು ಮತ್ತು ಅವರೇ ನಿರ್ದೇಶನ ಕೊಟ್ಟು ಈ ಸಭೆ ಸಮನ್ ಮಾಡಿ ಸದಸ್ಯರೆಲ್ಲರೂ ಕೂಡ ಇಲ್ಲಿಗೆ ಬರಬೇಕು, ಬಂದು ನನ್ನ ಮೆಸೇಜ್‌ನ್ನು ಕೇಳಬೇಕು, ನನ್ನ ಮಾತನ್ನು ಕೇಳಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಅವರು ಕರೆಸಿರುವುದು. ಅವರೇ ಕರೆಸಿರುವಾಗ ಮತ್ತು ಆರ್ಟಿಕಲ್ 175(1)ರ ಪ್ರಕಾರ ಭಾಷಣ ಮಾಡುತ್ತಿದ್ದೇನೆ ಎಂದು

ಬಹಳ ಸ್ಪಷ್ಟವಾಗಿ ಹೇಳಿರುವಾಗ ನಾವು ಅವರಿಗೆ ವಂದನೆಯನ್ನು ಸಲ್ಲಿಸತಕ್ಕಂಥದ್ದು ಉದ್ಭವವಾಗುವುದೇ ಇಲ್ಲ. ಇದು ಬಹಳ ಸ್ಪಷ್ಟವಾಗಿರತಕ್ಕಂಥದ್ದು. ಆರ್ಟಿಕಲ್ 176ರ ಕೆಳಗಡೆ ಭಾಷಣ ಮಾಡಿದಾಗ ಮಾತ್ರ ನೀವು ಆಗ ಅವರಿಗೆ ಕರೆದಿರುತ್ತೀರಿ, ಸರ್ಕಾರದ ಕಾರ್ಯಕ್ರಮಗಳನ್ನು, ನೀತಿಯನ್ನು ಆರ್ಟಿಕಲ್ 176ರ ಕೆಳಗಡೆ ಅವರು ಹೇಳಿರುತ್ತಾರೆ. ಅದಕ್ಕೋಸ್ಕರವಾಗಿ ನಾವು ಅವರನ್ನು ಕರೆದು, ಅವರಿಂದ ಭಾಷಣ ಮಾಡಿಸುವುದರಿಂದ, ಈ ಸದನ ಅವರಿಗೆ ವಂದನೆಯನ್ನು ಸಲ್ಲಿಸತಕ್ಕಂಥದ್ದು ಈ ಸದನದ ಕರ್ತವ್ಯ. ಅದಕ್ಕೋಸ್ಕರವಾಗಿ ನಾವು ನಿರ್ಣಯವನ್ನು ಮಾಡಿ ಅವರಿಗೆ ವಂದನೆಯನ್ನು ಸಲ್ಲಿಸಿ ಕಳುಹಿಸಿಕೊಡುತ್ತೇವೆ. ಇದು ನಡೆದುಬಂದಿರತಕ್ಕಂಥದ್ದು. ಈಗ ಏನು ಉದ್ಭವವಾಗಿರತಕ್ಕಂಥದ್ದರಲ್ಲಿ ಕೆಲವರು ಮಾತನಾಡಿರತಕ್ಕಂಥದ್ದು ಏನು? ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಬಾರದು ಎಂದು ಎಲ್ಲಿದೆ? ಆರ್ಟಿಕಲ್ 175ರ ಕೆಳಗಡೆ ಭಾಷಣ ಮಾಡಬಾರದು ಎಂದು ಎಲ್ಲಿದೆ? Constitution is silent!...... Constitution is not silent. ಆರ್ಟಿಕಲ್ 176ರಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. In Article 176 Clause (1) & (2) are very very clear. ಅದಕ್ಕೂ, ಇದಕ್ಕೂ ಡಿಸ್ಟಿಂಗ್‌ಷನ್ ಇದೆ. ಅದಕ್ಕೋಸ್ಕರವೇ ಎರಡು ಬೇರೆ ಬೇರೆ ಇರುವುದನ್ನು ಒಟ್ಟಿಗೇ ಒಂದೇ ಮಾಡಿ ನಾವು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಆರ್ಟಿಕಲ್ 176ರಲ್ಲಿ ಇರತಕ್ಕಂಥ ವ್ಯಾಪ್ತಿ ಮತ್ತು ಪರಿಣಾಮವನ್ನು ನಾವು ಆರ್ಟಿಕಲ್ 175ರಲ್ಲಿ ನೋಡುವುದಕ್ಕಾಗುವುದಿಲ್ಲ. ಆರ್ಟಿಕಲ್ 175ರ ವ್ಯಾಪ್ತಿ, ಪರಿಣಾಮವನ್ನು ಆರ್ಟಿಕಲ್ 176ರಲ್ಲಿ ನೋಡುವುದಕ್ಕಾಗುವುದಿಲ್ಲ. ಅವೆರಡೂ ಬೇರೆ ಬೇರೆ ಇರುವುದರಿಂದ ಮಾನ್ಯ ರಾಜ್ಯಪಾಲರು ಆರ್ಟಿಕಲ್ 175(1)ರಲ್ಲಿ ಭಾಷಣ ಮಾಡಿರುವುದರಿಂದ ತಾವು ದಯಮಾಡಿ ಮತ್ತೆ ನಮ್ಮ ಮನವಿಯನ್ನು ಪುನರ್ ಪರಿಶೀಲನೆಯನ್ನು ಮಾಡಬೇಕು. ಆರ್ಟಿಕಲ್ 175(1)ರಲ್ಲಿ ಮಾಡಿರುವ ಭಾಷಣದ ಮೇಲೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಚರ್ಚೆ ಮಾಡೋಣ. ನಾವು ಮಾತನಾಡುವಾಗ ಬೇಕಾದರೆ ಒಂದು ಹೆಜ್ಜೆ ಮುಂದೆ ಹೋಗಿ ಅವರಿಗೆ ಮಾತಿನಲ್ಲಿ ವಂದನೆಯನ್ನೂ ಕೂಡ ಹೇಳೋಣ. ಆದರೆ ವಂದನಾ ನಿರ್ಣಯವನ್ನು ನಾವು ಮೂವ್ ಮಾಡಿ, ಒಬ್ಬರು ಮೂವ್ ಮಾಡಿದ್ದನ್ನು ಮತ್ತೊಬ್ಬರು ಸೆಕೆಂಡ್ ಮಾಡಿರುವುದು ಇದೆಯಲ್ಲಾ, ಅದು ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ, ಸಂವಿಧಾನಕ್ಕೆ ವಿರುದ್ಧವಾಗುತ್ತದೆ. ಸಂವಿಧಾನಬಾಹಿರವಾದಂಥ ಕೆಲಸ ಇಲ್ಲಿ ಆಗಬಾರದು ಎನ್ನುವುದೇ ನನ್ನ ಕಳಕಳಿ. ಒಂದು ವೇಳೆ ಸರ್ಕಾರ ನಮಗೆ ಮೆಜಾರಿಟಿ ಇದೆ, ನಾವು ಮಾಡುತ್ತೇವೆ ಎನ್ನುವ ಧೋರಣೆಯಿಂದ ಹೋದರೆ ನಾವು ಅದಕ್ಕೆ ಭಾಗಿಯಾಗುವುದಕ್ಕಾಗುವುದಿಲ್ಲ. ರಾಜ್ಯಾಂಗಕ್ಕೆ ವಿರುದ್ಧವಾದಂಥ ನಿರ್ಣಯಗಳಿಗೆ ನಾವು ಭಾಗಿಯಾಗುವುದಕ್ಕಾಗುವುದಿಲ್ಲ. ಅದರಲ್ಲಿ ನಾವು ಭಾಗಿಯಾಗುವುದಕ್ಕಾಗುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದು ಅಸಹಕಾರ ಎಂದು ತಾವು ತಿಳಿದು ಕೊಳ್ಳಬಾರದು. ಅಸಹಕಾರ ಎಂದು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಜ್ಯಾಂಗದ ವಿರುದ್ಧವಾಗಿ ಸ್ಪೀಕರ್‌ರವರೂ ಕೂಡ ರಾಜ್ಯಾಂಗದ ವಿಧಿ ವಿಧಾನಗಳನ್ನು ಬಿಟ್ಟು ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ನಾವೇ ಮಾಡಿಕೊಂಡಿರತಕ್ಕಂಥ ಸದನದ ಕಾರ್ಯವಿಧಾನ ಮತ್ತು ನಡಾವಳಿ ನಿಯಮಗಳು ಇದೆಯಲ್ಲಾ ಅದನ್ನು ಸಸ್ಪೆಂಡ್ ಮಾಡಿ ಬೇರೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರಿಗೆ ಅವಕಾಶವಿದೆ ಮತ್ತು ಅಧಿಕಾರವಿದೆ. ಇನ್‌ಹರೆಂಟ್ ಪವರ್ ಇದೆ. ಆದರೆ ರಾಜ್ಯಾಂಗದ ವಿಧಿ ಬದಲಾಯಿಸುವುದಕ್ಕೆ ಯಾವುದೇ ಇನ್‌ಹರೆಂಟ್ ಪವರ್ ಸ್ಪೀಕರ್‌ರವರಿಗೆ ಇಲ್ಲ ಎನ್ನತಕ್ಕಂಥದ್ದು

ನನ್ನ ಸ್ಪಷ್ಟ ಅಭಿಪ್ರಾಯ. ಆದುದರಿಂದ ವಂದನಾ ನಿರ್ಣಯವನ್ನು ಮಂಡನೆ ಮಾಡಿರುವುದೇ ತಪ್ಪು. ಆ ಕಾರಣದಿಂದ ಮಾನ್ಯ ಅಧ್ಯಕ್ಷರು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾವು ಕೇಳುತ್ತಿರುವುದು. ಇವೊತ್ತು ಅವರು ಹಠ ಮಾಡಿ ಅವರು ಅದನ್ನು ಒಂದು ಪ್ರೆಸ್ಟೀಜ್ ಎಂದು ಇಟ್ಟುಕೊಂಡುಬಿಟ್ಟರೆ ಬಾರಿ ಕಷ್ಟವಾಗುತ್ತದೆ. ಇಡೀ ರಾಜ್ಯದ ಜನರಿಗೆ ನಾವು ಹೇಳಬೇಕಾಗುತ್ತದೆ, ಯಾವ ಕಾರಣಕ್ಕೋಸ್ಕರವಾಗಿ ನಾವು ಇದಕ್ಕೆ ಸಹಕಾರ ಕೊಡುವುದಕ್ಕೆ ಆಗಲಿಲ್ಲ ಎನ್ನುವುದನ್ನು ನಾವು ರಾಜ್ಯದ ಜನರಿಗೆ ಹೇಳಬೇಕಾಗುತ್ತದೆ. ಇದು ರಾಜ್ಯಾಂಗಕ್ಕೆ ವಿರುದ್ಧವಾಗಿರುವುದರಿಂದ ನಾವು ಸಹಕಾರ ಕೊಡುವುದಕ್ಕಾಗುವುದಿಲ್ಲ. ಈ ಸರ್ಕಾರ ರಾಜ್ಯಾಂಗದ ಎಲ್ಲಾ ವಿಧಿವಿಧಾನಗಳನ್ನು ಗಾಳಿಗೆ ತೂರಿ ನಿರ್ಣಯ ಮಾಡುತ್ತಿದ್ದಾರೆ, ಆ ರೀತಿಯಲ್ಲಿ ಇಲ್ಲಿ ಆಗುತ್ತಿದೆ ಎಂದು ನಾವು ಜನರಿಗೆ ಹೇಳಬೇಕಾಗುತ್ತದೆ. ಆದಕಾರಣ, We cannot be a party to this type of unconstitutional decision. ಇದು ನಮ್ಮ ವಾದ.

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಮಾತನಾಡಲು ಕರೆದಿದ್ದೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್: ಹಿಂದಿನ ಸರ್ಕಾರದಲ್ಲಿ ವಂದನಾ ನಿರ್ಣಯ ಮಂಡನೆಯೇ ಆಗಿಲ್ಲ. ಹಿಂದಿನ ಸರ್ಕಾರದಲ್ಲಿ ಇದು ಮಂಡನೆ ಆಗಿದ್ದರೆ, ಸಿದ್ಧರಾಮಯ್ಯನವರ ಮಾತನ್ನು ಒಪ್ಪಬಹುದು. ಆಗ ಸಿದ್ಧರಾಮಯ್ಯನವರು ಹೇಳುವ ಮಾತಿಗೆ ಬೆಲೆ ಬರುತ್ತದೆ. ಆದರೆ ಹಿಂದಿನ ಸರ್ಕಾರದಲ್ಲಿ ಇದು ಮಂಡನೆ ಆಗಿಲ್ಲ. ಸರ್ಕಾರವೇ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎನ್ನುವಂತಹ ಮಾತನ್ನು ಹೇಳಬೇಕಾಗುತ್ತದೆ.

(ಗೊಂದಲ)

ಮಾನ್ಯ ಸದಸ್ಯರು: ವಂದನಾ ನಿರ್ಣಯವನ್ನು ಖಂಡನೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಪಡೆದುಕೊಳ್ಳಬಹುದು, ಆದರೆ ಮಂಡಿಸಿಲ್ಲವೆಂದು ಹೇಗೆ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು: ಈಗ ನನ್ನ ಮನವಿ ಏನೆಂದರೆ ಒಬ್ಬೊಬ್ಬರಾಗಿ ಮಾತನಾಡಿ. ವಿಷಯವನ್ನು ಚರ್ಚೆ ಮಾಡುವುದಕ್ಕೇ ಈ ಮನೆ ಇರುವುದು. ಒಬ್ಬರು ಎದ್ದತಕ್ಷಣ ಹತ್ತು ಜನ ಎದ್ದು ಗಲಾಟೆ ಮಾಡಬೇಡಿ. ಈಗ ನಾನು ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ...

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದು ಎಲ್ಲಿಯವರೆಗೆ . .

ಅಧ್ಯಕ್ಷರು: ನಿಮಗೆ ಅವಕಾಶ ಕೊಡುತ್ತೇನೆ. ಈಗ ನಾನು ಅವರನ್ನು ಕರೆದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಾವು ಒಂದು ಸಾರಿ ಚರ್ಚೆಗೆ ಅವಕಾಶ ಕೊಟ್ಟು ರೂಲಿಂಗ್ ಕೊಟ್ಟಮೇಲೆ ಮತ್ತೇ ಅದೇ ವಿಷಯವನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ತಾವು ಆ ವಿಷಯದಲ್ಲಿ ರೂಲಿಂಗ್ ಕೊಟ್ಟಾಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ . . . . . .

ಅಧ್ಯಕ್ಷರು: ದಯಮಾಡಿ ನಾನು ಹೇಳುವುದನ್ನು ಕೇಳಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಕಾನೂನು ಸಚಿವರು ಹೇಳುತ್ತಿರುವುದೇನೆಂದರೆ, ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಿದೆ. ಆ ಕಡೆಯವರು ಈ ಕಡೆಯವರು ಎಲ್ಲಾ ಮಾತನಾಡಿದ್ದೀರಿ. ಅದಾದಮೇಲೆ ನಾನೊಂದು ರೂಲಿಂಗ್ ಕೊಟ್ಟಿದ್ದೇನೆ. ಆ ರೂಲಿಂಗ್ ಅನ್ನು ಮರು ಪರಿಶೀಲನೆ ಮಾಡಿ ಎಂದು ಹೇಳುತ್ತೀರಿ. ಮರು ಪರಿಶೀಲನೆ ಮಾಡುವುದಕ್ಕೆ ಹೊಸ ವಿಚಾರಗಳೂ ಏನಿವೆ ಎಂದು ಹೇಳಬೇಕು? ಈಗ ನನ್ನ ರೂಲಿಂಗ್ ಇದೆ, ಯಾವ ಕಾರಣಕ್ಕೆ ಅದನ್ನು ಮರು ಪರಿಶೀಲನೆ ಮಾಡಬೇಕೆಂದು ಹೇಳಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಎಲ್ಲರೂ ಹೇಳಿದ್ದನ್ನೇ ಹೇಳುತ್ತಾರೆ. ಆರ್ಟಿಕಲ್ 175ರ ಬಗ್ಗೆ ಬಿಟ್ಟರೆ ಬೇರೆ ವಿಷಯ ಏನಾದರೂ ಇದೆಯಾ? ಎಲ್ಲಿಯವರೆಗೆ ಚರ್ಚೆ ನಡೆಸುವುದು? ಚರ್ಚೆಯಾಗಿ ಎಲ್ಲಾ ಆಗಿದೆ, ಅವರು ಹೇಳಿರುವುದಕ್ಕೆಲ್ಲಾ ಕ್ಲಾರಿಫೈ ಮಾಡಿ ತಾವು ರೂಲಿಂಗ್ ಕೊಟ್ಟಿದ್ದೀರಿ. ರೂಲಿಂಗ್ ಎಲ್ಲಾ ಆಗಿ ತಾವು ಹೇಳಿದಿರಿ, ಮುಂದಿನ ಕಾರ್ಯಕ್ರಮವನ್ನು ಸದನದಲ್ಲಿ ನಡೆಸಿ ಎಂದು ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗುವುದು? ಇನ್ನೂ ಎರಡು ದಿವಸ ಚರ್ಚೆ ಮಾಡಬಹುದು, ಆದರೆ ಈ ಚರ್ಚೆಗೆ ಒಂದು ಅಂತ್ಯ ಬೇಕಲ್ಲ?

ಅಧ್ಯಕ್ಷರು: ಈಗ ನಾಲ್ಕೈದು ಜನ ಸದಸ್ಯರು ಅವರವರ ಅಭಿಪ್ರಾಯಗಳನ್ನು ಕೊಡುತ್ತಾರೆ. ಮರು ಪರಿಶೀಲನೆ ಮಾಡುವ ವಿಚಾರದಲ್ಲಿ ಹೇಳುತ್ತೇನೆಂದು ಹೇಳುತ್ತಿದ್ದಾರೆ. What are the new points? ಹೇಳಿ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಎಲ್ಲರೂ ಏನು ವಿಚಾರ ಮಾತನಾಡಿದ್ದಾರೆ, ಅದನ್ನೇ ಶ್ರೀ ವಾಟಾಳ್ ನಾಗರಾಜ್ ಅವರು ಹೇಳುತ್ತಾರೆ. ಆದ್ದರಿಂದ, ವಾಟಾಳ್ ನಾಗರಾಜ್ ಅವರು ಮಾತನಾಡುವ ಅವಶ್ಯಕತೆ ಇಲ್ಲ. ಹೊಸ ವಿಚಾರ ಏನಾದರೂ ಹೇಳುತ್ತಾರಾ? ಆರ್ಟಿಕಲ್ 175 ಅಥವಾ 176ರ ವಿಚಾರ ಬಿಟ್ಟು ಬೇರೆ ಏನಾದರೂ ಹೇಳುತ್ತಾರಾ? ಇಲ್ಲ. ಆದುದರಿಂದ ದಯಮಾಡಿ ಇಲ್ಲಿ ಚರ್ಚೆಯನ್ನು ಮುಂದುವರೆಸುವುದು ಸೂಕ್ತವಲ್ಲ. ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ಚರ್ಚೆಯನ್ನು ಮುಂದುವರೆಸುವುದು ಯಾವುದೇ ರೀತಿಯಿಂದ ಸಾಧುವಾದುದಲ್ಲ. ಈ ಚರ್ಚೆಗೆ ಅವಕಾಶ ಕೊಡುವಂತಹ ಅವಶ್ಯಕತೆ ಇಲ್ಲ. ದಯಮಾಡಿ ತಾವು ಇನ್ನೊಂದು ಸಲ ಎಲ್ಲರನ್ನೂ ಕರೆದು ಮಾತನಾಡಿ. ಮಾನ್ಯ ಅಧ್ಯಕ್ಷರೆ, ಅವರನ್ನು ಬಹಳ ಸಲ ಕರೆದಿದ್ದೀರಿ; ಚರ್ಚೆ ಮಾಡಿದ್ದೀರಿ. ಬೆಳಿಗ್ಗೆ 11.00 ಗಂಟೆಯಿಂದ 1.00 ಗಂಟೆಯವರೆಗೆ ಒಟ್ಟು ಎರಡು ಗಂಟೆ ಚರ್ಚೆ ಮಾಡಿದ್ದೀರಿ. ಇನ್ನೊಂದು ಬಾರಿ ಬೇಕಾದರೆ ಅವರನ್ನು ಕರೆಯಿರಿ. ಕರೆದು ಅವರ ಜೊತೆ ಚರ್ಚೆ ಮಾಡಿ. ಆದರೆ ಈ ಸದನದ ವೇಳೆಯನ್ನು ಅಪವ್ಯಯ ಮಾಡುವುದು ನನಗಂತೂ ಸರಿಯೆನಿಸುವುದಿಲ್ಲ. ದಯಮಾಡಿ ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ, ಇದನ್ನು ಇಲ್ಲಿಗೆ ಮುಕ್ತಾಯ ಮಾಡಬೇಕೆನ್ನುವುದು ನನ್ನ ಕಳಕಳಿಯ ಮನವಿ. ದಯಮಾಡಿ ಈ ರಾಜ್ಯದ ಜನತೆ ಪರವಾಗಿ ಕೆಲಸ ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವು ಯಾವ ವಿಚಾರದಲ್ಲಿ ಮರು ಪರಿಶೀಲನೆ ಮಾಡಬೇಕೆಂದು ಇದೆ, ಅದರ ಬಗ್ಗೆ ಹೇಳಿ ಎಂದು ಹೇಳಿದಿರಿ. ನಾನು ಈಗ ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಅವರು ಮಾತನಾಡಲಿ. ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ನೀವು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಇದನ್ನು ಬಿಟ್ಟು ಬೇರೆ ಹೇಳುವುದಕ್ಕೆ ಬರುವುದೇ ಇಲ್ಲ . . . . .

ಶ್ರೀ ಆರ್.ವಿ. ದೇಶಪಾಂಡೆ: ಏಕೆ ಬರುವುದಿಲ್ಲ? ಯಾವಾಗ ಯಾವ ಸ್ಪಾರ್ಕ್ ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಇದು ಸಂವಿಧಾನದ ಪ್ರಶ್ನೆ ಇದೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ನಾವು ಸಹಕಾರ ಕೊಡಬಾರದು ಎಂದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ತಾವು ನನ್ನನ್ನು ಕರೆದಿದ್ದೀರಿ, ನಾನು ಒಂದು ಒಳ್ಳೆಯ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ತಾನು ಯಾವ್ಯಾವ ವಿಚಾರವಾಗಿ ಮರುಪರಿಶೀಲನೆ ಮಾಡಬೇಕೆಂದು ಕೇಳಿದ್ದೀರಿ. ಅದರ ಬಗ್ಗೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಹೀಗಾದರೆ ಹೇಗೆ? ಎಲ್ಲರೂ ಹೀಗೆ ಮಾತನಾಡಿದರೆ ನಾವೇನು ಮಾಡಲಿ? ನೀವೆಲ್ಲಾ ನನಗೆ ಕೋಪ ಮಾಡಿಕೊಳ್ಳುತ್ತೀರಿ ಎಂದು ಹೇಳುತ್ತೀರಿ. ಅದಕ್ಕೋಸ್ಕರ ನಾನು ಸುಮ್ಮನೆ ಕುಳಿತುಕೊಂಗಿದ್ದೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಕಾನೂನು ಸಚಿವರು ಏನು ಹೇಳಿದರು ಅದಕ್ಕೆ ಉತ್ತರ ಹೇಳುತ್ತಿದ್ದೇನೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಚರ್ಚೆ ಮಾಡಿದ್ದೇವೆ. ತಾವು ಮೂರ್‍ನಾಲ್ಕು ಬಾರಿ ಬೆಎಸಿ ಕರೆದಿದ್ದೀರಿ. ಚರ್ಚೆ ಮಾಡಿದಿರಿ, ಆದರೆ ಇನ್ನೂ ಎಲ್ಲಿಯವರೆಗೆ ಇದರ ಬಗ್ಗೆ ಚರ್ಚೆ ಮಾಡುತ್ತೀರಿ? ಇದಕ್ಕೆ ಏನಾದರೂ ಅಂತ್ಯವಿದೆಯೇ ಎಂದು ಕೇಳುತ್ತೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರು ಯಾವ ಕಾರಣಕ್ಕೆ ಮರು ಪರಿಶೀಲನೆ ಮಾಡಬೇಕಾಗಿದೆ ಎಂದು ಕೇಳುತ್ತಿದ್ದಾರೆ. . . . .

ಶ್ರೀ ಕೆ. ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ನಿಮ್ಮ ಮನಸ್ಸನ್ನು ನಮ್ಮ ಕಡೆ ಒಲಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಮರು ಪರಿಶೀಲನೆ ವಿಚಾರದಲ್ಲಿ ಅದಕ್ಕೆ ನಮಗೆ ಅವಕಾಶ ಮಾಡಿಕೊಡಿ. ನೀವೆ ಹೇಳಿದಿರಿ. ಮರು ಪರಿಶೀಲನೆ ಬಗ್ಗೆ ಮಾತನಾಡಿ ಎಂದು. ನಾನು ಮಾತನಾಡುತ್ತೇನೆ. ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಶ್ರೀನಿವಾಸ ಗೌಡರೆ, ಬಸವರಾಜ್ ಹೊರಟ್ಟಿಯವರು ಹೇಳುತ್ತಿರುವುದು ಹಳೇ ವಿಚಾರಗಳನ್ನೇ ಹೇಳುತ್ತಿದ್ದೀರಿ ಎಂದು.

(ಗೊಂದಲ)

ಶ್ರೀಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಯಾವ ಕಾರಣಕ್ಕಾಗಿ ಮರು ಪರಿಶೀಲನೆ ಮಾಡಬೇಕೆಂದು ಈ ರೂಲ್‌ನಲ್ಲಿ ಇದೆ ?

(ಗೊಂದಲ)

ಅಧ್ಯಕ್ಷರು: ಅವರು ಹೊಸ ವಿಚಾರ ಏನೂ ಹೇಳುತ್ತಿಲ್ಲ, ಮತ್ತೆ ಮತ್ತೆ ಹಳೇ ವಿಚಾರವನ್ನು ಹೇಳುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಬಸವರಾಜ್ ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದು ಎಲ್ಲಿಯುವರೆಗೆ ಚರ್ಚೆಯಾಗುವುದು ಕಾಲ ನಿಗದಿ ಮಾಡಿ ಇದಕ್ಕೆ ಏನಾದರೂ ಅಂತ್ಯ ಇದೆಯೆ? ಮತ್ತೆ ಏನಾದರೂ ಹೇಳಬೇಕಲ್ಲಾ. ಎಲ್ಲಿಯವರೆಗೆ ಚರ್ಚೆಯಾಗಬೇಕು ಎನ್ನುವುದಕ್ಕೆ ದಯಮಾಡಿ ಒಂದು ತೀರ್ಮಾನ ಮಾಡಿ ಇದು ಎಷ್ಟು ಗಂಟೆಯವರೆಗೂ ಚರ್ಚೆಯಾಗಬೇಕೆನ್ನುವುದರ ಬಗ್ಗೆ ತೀರ್ಮಾನ ಮಾಡಿ.

ಅಧ್ಯಕ್ಷರು: ಈಗ ಇಬ್ಬರು ಅಥವಾ ಮೂವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಏಕೆಂದರೆ ಮರು ಪರಿಶೀಲನೆ ಬಗ್ಗೆ ಹೇಳುತ್ತೇನೆ ಎಂದು ಹೇಳುತ್ತಿದ್ದಾರಲ್ಲಾ ಅದಕ್ಕೆ. ಆಮೇಲೆ ನಾನು ಏನು ಮಾಡಬೇಕೆಂದು ನೋಡಿ ಮಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನೀವು ನನ್ನನ್ನು ಕರೆದಿದ್ದೀರಿ.

ಅಧ್ಯಕ್ಷರು: ಮಾತನಾಡಿ. ಎರಡೇ ನಿಮಿಷ, ಈಗ ನಾಲ್ಕೈದು ಜನಕ್ಕೆ ಆ ಕಡೆ ಈ ಕಡೆಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಏಕೆಂದರೆ ಹೊಸ ವಿಚಾರ ಇದ್ದರೆ. . .

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ತಾವು ಬೆಳಿಗ್ಗೆ 10.30 ಗಂಟೆಯಲ್ಲಿ ನಮ್ಮನ್ನೆಲ್ಲಾ ಕರೆದಿದ್ದಿರಿ. ತಾವು ಸತ್ ಸಂಪ್ರದಾಯದ ಪ್ರಕಾರ ಎಲ್ಲಾ ಮುಖಂಡರನ್ನು ಕರೆದು ಈ ಸದನ ಮತ್ತೆ ಸರಿಯಾಗಿ ನಡೆಯಬೇಕು ಎನ್ನುವ ದೃಷ್ಟಿಯಿಂದ ತಾವು ಮಾತುಕತೆಯನ್ನು ನಡೆಸಿದಿರಿ. ನಾವು ತಮಗೆ ಆಭಾರಿಯಾಗಿದ್ದೇವೆ. ಮತ್ತೆ ತಮ್ಮ ತೀರ್ಪನ್ನು ಪ್ರಶ್ನೆ ಮಾಡುವಂತಹ ಸಂಗತಿಯೇ ಇಲ್ಲ. ಆದರೆ ನಿಮಗೆ ಎಷ್ಟು ಬೇಕಾದರೂ ಮನವಿ ಮಾಡಬಹುದು ಅದಕ್ಕೆ ಅವಕಾಶವಿದೆ. ಇನ್ನು ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು ಎನ್ನುವಂತಹ ವಿಚಾರವನ್ನು ಏನು ಹೇಳಿದ್ದಾರೆ, ಅದಕ್ಕೆ ನಾನೂ ಧ್ವನಿಗೂಡಿಸುತ್ತೇನೆ, ಅದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ತಮ್ಮಲ್ಲಿ ನಾನು ಮತ್ತೊಮ್ಮೆ ಮನವಿ ಮಾಡುತ್ತಿದ್ದೇನೆ. ಇಂತಹ ಅನೇಕ ಸಂದರ್ಭದಲ್ಲಿ ಒಂದು ಬಾರಿ ಅಲ್ಲ ನಾಲ್ಕಾರು ಬಾರಿ ಕರೆದು ಮಾತನಾಡಿರುವುದು ಉಂಟು. ಲೋಕಸಭೆಯಲ್ಲೂ ತಾವು ಪ್ರತಿದಿನ ನೋಡುತ್ತಿದ್ದೀರಿ. ಇತ್ತೀಚಿನ ದಿನಗಳಲ್ಲಿ ಲೋಕಸಭೆಯಲ್ಲಿ ನಾಲ್ಕೈದು ಬಾರಿ ಮುಂದೆ ಹೋಗಿರುವುದು ಉಂಟು. ನಾವು ಇವತ್ತು ಯಾವುದನ್ನೂ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ, ಒಂದು ಹೊಸ ಸೂಚನೆಯನ್ನು ತಾವು (ಅಧ್ಯಕ್ಷರು) ಕೊಡಬೇಕಾಗುತ್ತದೆ. ಆದುದರಿಂದ ಈ ಸದನವನ್ನು ನಡೆಸತಕ್ಕಂಥ ಜವಾಬ್ದಾರಿ ತಮಗೆ ಇದೆ. ಈ ಸದನ ಈ ರೀತಿ ಆಗಬೇಕು ಎನ್ನುವ ಇಚ್ಛೆ ಯಾರಿಗೂ ಇಲ್ಲ. ಆದರೆ ಕಾನೂನುಬಾಹಿರವಾಗಿ ಇದೆ ಎನ್ನುವಂತಹ ಮಾತನ್ನು ನಾವು ಹೇಳಿದರೂ ತಾವು ತೀರ್ಪನ್ನು ಕೊಟ್ಟಿದ್ದೀರಿ. ಅದನ್ನು ನಾವು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ದಯಮಾಡಿ ಮತ್ತೊಮ್ಮೆ ತಾವು ಸದನವನ್ನು ಮುಂದೂಡಿ ಇನ್ನೊಂದು ಸಾರಿ ಕರೆದು ಕೇಳಿ, ತಪ್ಪೇನೂ ಆಗುವುದಿಲ್ಲ. ನೀವು ಮಾಡಿ, ನಿಮಗೆ ಸೇರಿದ್ದು.

ಅಧ್ಯಕ್ಷರು: ಹೊಸ ವಿಚಾರ ಹೇಳಿ ಎಂದರೆ ಹಳೇ ವಿಚಾರ ಹೇಳುತ್ತಿದ್ದೀರಲ್ರೀ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: XXX ಮತ್ತೊಮ್ಮೆ ತಾವು ಸಭೆ ಕರೆಯಬೇಕು.ಒಂದಲ್ಲ, ಹತ್ತು ಸಾರಿ ಸಭೆಯನ್ನು ಕರೆಯಬೇಕು. ತಾವು ಒಂದಲ್ಲ ಹತ್ತು ಸಾರಿ ಸಭೆಯನ್ನು ಕರೆದು ಮಾತನಾಡಬೇಕಾಗುತ್ತದೆ. ತಾವು ಸದನವನ್ನು ಮುಂದೂಡಿ ಮತ್ತೆ ಸಭೆಯನ್ನು ಕರೆದು ಮಾತನಾಡಬೇಕು, ನಾವು ಮಾತನಾಡುವುದರಿಂದ ಒಳ್ಳೆಯದಾಗುತ್ತದೆ. ಇದನ್ನು ಬಿಟ್ಟು ತಾವು ಮಾಡಿದರೆ, ನಾವು x x. ಅದರ ಜೊತೆಯಲ್ಲಿ ರಾಜೀ ಆಗುವ ಪ್ರಶ್ನೆ ಇಲ್ಲವೇ ಇಲ್ಲವೆಂಬ ಮಾತನ್ನು ಸ್ಪಷ್ಟಪಡಿಸುತ್ತೇವೆ, ನಾನು ಮತ್ತೊಮ್ಮೆ ಮನವಿ ಮಾಡುವುದೇನೆಂದರೆ ತಾವು ಸದನವನ್ನು ಮುಂದೂಡಿ, ಸಭೆಯನ್ನು ಕರೆಯಿರಿ, ಎಂದು ನಾನು ಮತ್ತೊಮ್ಮೆ, ಮತ್ತೊಮ್ಮೆ ಮನವಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರೇ, ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನಾನು ಇದು ಯಾವುದನ್ನೂ ಹೇಳುವುದಿಲ್ಲ. ನಾನು ಬೇರೆ ಒಂದು ವಿಚಾರ ಇದೆ, ಅದನ್ನು ಹೇಳುತ್ತೇನೆ.

ಅಧ್ಯಕ್ಷರು: ಈಗ ನಾನು ಮಾನ್ಯ ರಾಮಸ್ವಾಮಿಯವರನ್ನು ಮಾತನಾಡಲು ಕರೆದಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು): ಮಾನ್ಯ ಅಧ್ಯಕ್ಷರೇ, ವಿಧಾನಮಂಡಲದ ಇತಿಹಾಸದಲ್ಲಿ ಇದೊಂದು ಅಪೂರ್ವವಾದಂತಹ ಪ್ರಸಂಗವೆಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ಒಂದು ಅನಿವಾರ್ಯವಾದಂತಹ ಸನ್ನಿವೇಶ ಕೂಡ ಸೃಷ್ಟಿಯಾಗಿದೆ. ಮಾನ್ಯ ರಾಜ್ಯಪಾಲರು ಒಂದು ತಿಂಗಳ ಅವಧಿಯಲ್ಲಿ ಎರಡು ಬಾರಿ, ವಿಧಾನಮಂಡಲದ ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡತಕ್ಕಂಥ ಒಂದು ಸಂದರ್ಭ ಸೃಷ್ಟಿಯಾಗಿದೆ. ನಮ್ಮ ವಿರೋಧ ಪಕ್ಷದ ಎಲ್ಲಾ ಗೌರವಾನ್ವಿತ ಪ್ರಮುಖರು, ಆ ಬಗ್ಗೆ ಚರ್ಚೆ ಮಾಡಿದ್ದಾರೆ. ಇಲ್ಲಿ ಉತ್ತಮವಾಗಿ ಚರ್ಚೆಯನ್ನು ಮಾಡಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಈ ಸ್ಥಳವನ್ನು ರಾಜಕೀಯ ವೇದಿಕೆಯನ್ನಾಗಿ ಮಾಡಿಕೊಳ್ಳಬೇಡಿ, ಎಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ನನ್ನ ಅಭಿಪ್ರಾಯವನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಿ. ಶಿವರಾಂ: ರಾಜಕೀಯ ವೇದಿಕೆಯನ್ನು ನೀವು ಮಾಡಿಕೊಂಡಿದ್ದೀರಿ, ನಾವು ಮಾಡಿಕೊಂಡಿಲ್ಲ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು): ನಾನು ನಿಮ್ಮನ್ನು ವಿನಂತಿ ಕೂಡ ಮಾಡಿಕೊಳ್ಳಬಾರದೆ? ನಾನು ಏನು ನಿಮ್ಮ ಮೇಲೆ ದೌರ್ಜನ್ಯ ಮಾಡಲು ಬಂದಿದ್ದೇನೆಯೆ? ನಾನು ಎಷ್ಟು ಸೌಜನ್ಯದಿಂದ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದಕ್ಕೂ ನಿಮ್ಮಲ್ಲಿ ತಾಳ್ಮೆ ಇಲ್ಲವೆಂದರೆ, ಈ ರಾಜ್ಯ ಮತ್ತು ರಾಷ್ಟ್ರದ ಆಡಳಿತವನ್ನು, ಮುಕ್ಕಾಲು ಭಾಗದ ಅವಧಿಯನ್ನು . . .

ಮಾನ್ಯ ಸದಸ್ಯರು: ಸಂವಿಧಾನವನ್ನು ಮುರಿದುಬಿಟ್ಟರಲ್ಲಾ . . . . . .

---

x ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ರಾಮಸ್ವಾಮಿಯವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎ.ಟಿ. ರಾಮಸ್ವಾಮಿ: ನೀವು ಮಾತನಾಡುವಿರಂತೆ ಸುಮ್ಮನೆ ಇರಿ. ನೀವು ಎಲ್ಲಾ ಮಾತನಾಡುವಾಗ, ನೀವು ನೋಡಿರಬಹುದು. ನಾನು ಮಧ್ಯೆ ಎದ್ದು ಹಸ್ತಕ್ಷೇಪವನ್ನು ಮಾಡುವುದಿಲ್ಲ. ನಾನು ಇಲ್ಲಿ ಯಾವುದೂ ಕಾನೂನು ಬಾಹಿರವಾದಂತಹ ಮಾತುಗಳನ್ನು ಆಡುತ್ತಾ ಇಲ್ಲ. ನನಗೂ ಗಟ್ಟಿ ಧ್ವನಿ ಇದೆ, ತಾವುಗಳು ದಯವಿಟ್ಟು ಸಹಕರಿಸಬೇಕು. ನಾನು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಯಾವತ್ತೂ ಕೂಡ ಇವರು ಮಾತನಾಡುವಾಗ, ಮಧ್ಯೆ ಹಸ್ತಕ್ಷೇಪವನ್ನು ಮಾಡಿಲ್ಲ, ಇಂಟರ್‌ಪಿಯರ್ ಆಗಿಲ್ಲ. ಈಗ ಮುಕ್ಕಾಲು ಭಾಗದ ಅವಧಿಯಲ್ಲಿ ಈ ರಾಷ್ಟ್ರ, ರಾಜ್ಯದ ಆಡಳಿತವನ್ನು ಮಹಾನ್ ಪಕ್ಷ ನಡೆಸಿದೆ. ನಾನು ಇದ್ದೆ, ಇಲ್ಲವೆಂದು ಹೇಳಿಲ್ಲ, ನೀವು ಹೇಳುವುದಕ್ಕೆ ಮುಂಚಿತವಾಗಿಯೇ ನಾನು ಹೇಳುತ್ತಿದ್ದೇನೆ. ನಾನು ಇರುವುದನ್ನು ಇಲ್ಲವೆಂದು ಹೇಳುವುದಿಲ್ಲ. ಈ ಕಡೆ ಕುಳಿತುಕೊಂಡು ಎಲ್ಲಾ ಮಹಾ ನಾಯಕರು, ಅಂಜನಮೂರ್ತಿಯವರೇ.....

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಮಾತನಾಡಲಿ, ಅವರು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎ.ಟಿ. ರಾಮಸ್ವಾಮಿ: ನಾವು ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಈ ವೇದಿಕೆಯನ್ನು ಉಪಯೋಗ ಮಾಡೋಣ. ಅದನ್ನು ಪರಿಹರಿಸುವಂಥಾದ್ದಕ್ಕೆ ಉಪಯೋಗ ಮಾಡೋಣ. ನಿಮ್ಮ ಪಕ್ಷದ ಆಂತರಿಕ ವಿಷಯವನ್ನು ಇಲ್ಲಿ ಚರ್ಚೆ ಮಾಡೋಣವೇ?

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ನಮ್ಮ ಹಿರಿಯ ನಾಯಕರುಗಳು ಇಲ್ಲಿ ಕುಳಿತುಕೊಂಡು ಮುಕ್ಕಾಲು ಭಾಗ ಅವಧಿಯ ಆಡಳಿತವನ್ನು ನಡೆಸಿ, ಈ ದೇಶದ ಸಂವಿಧಾನದ ಬಗ್ಗೆ, ಸಂವಿಧಾನದ ರಚನೆಯ ಬಗ್ಗೆ, ಮಾತನಾಡಿರುವುದನ್ನು ನಾವೆಲ್ಲರೂ ಕೇಳಿದ್ದೇವೆ. ನಾವು ತಪ್ಪು ಎಂದು ಭಾವಿಸಿಕೊಂಡಿಲ್ಲ. ಆದರೆ ಅದೇ ಪಕ್ಷದ ನಾಯಕರು ಇವತ್ತು ರಾಜ್ಯಪಾಲರು ಇವರು ಸಂವಿಧಾನದ ಮುಖ್ಯಸ್ಥರ ಬಗ್ಗೆ, ಘನತೆವೆತ್ತ ಅಧ್ಯಕ್ಷರ ಬಗ್ಗೆ ಧಿಕ್ಕಾರವನ್ನು ಕೂಗಿದ್ದು ನೋಡಿ, ನನ್ನ ಮನಸ್ಸಿಗೆ ನೋವಾಗಿದೆ. ಇದು ಒಳ್ಳೆಯದೆಂದು ನಿಮ್ಮ ಮನಸ್ಸಿಗೆ ಅನಿಸುತ್ತದೆಯೆ?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, ಮಾನ್ಯ ಶಿವರಾಂರವರೇ, ಕುಳಿತುಕೊಳ್ಳಿ ಅವರು ಮಾತನಾಡಲಿ.

ಶ್ರೀ ಎ.ಟಿ. ರಾಮಸ್ವಾಮಿ: ನಮ್ಮ ನಾಯಕರಾದಂತಹ ಮಾನ್ಯ ಕೆ.ಆರ್. ರಮೇಶ್ ಕುಮಾರ್‌ರವರು ಮಾತನಾಡುತ್ತಾ, 19ನೇ ತಾರೀಖಿನಂದು ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂತು ಜಂಟಿ ಸದನವನ್ನು ಉದ್ದೇಶಿಸಿ ಭಾಷಣವನ್ನು ಮಾಡಿದರು. ಆ ಭಾಷಣವನ್ನು ಮಾಡುವುದಕ್ಕಿಂತ ಮುಂಚಿತವಾಗಿ ಅವರು ಆಲೋಚನೆಯನ್ನು ಮಾಡಬೇಕಾಗಿತ್ತು. 18ನೇ ತಾರೀಖಿನಂದು ಜೆ.ಡಿ.ಎಸ್. ಮತ್ತು ಬಿ.ಜೆ.ಪಿ.ಯ ಶಾಸಕರುಗಳು ರಾಜ್ಯಪಾಲರಿಗೆ ಈ ಸರ್ಕಾರ ಬಹುಮತವನ್ನು ಕಳೆದುಕೊಂಡಿದೆಯೆಂದು ಸಹಿ ಮಾಡಿ ಕೊಟ್ಟಮೇಲೆ, ವಿಶ್ವಾಸ ಕಳೆದುಕೊಂಡಿದೆಯೆಂದು ಗೊತ್ತಾದ ಮೇಲೆ, ಬಂದು ಇಲ್ಲಿ 19ನೇ ತಾರೀಖಿನಂದು ಭಾಷಣವನ್ನು ಮಾಡಬಾರದಿತ್ತು, ಎಂಬ ಮಾತನ್ನು

ಹೇಳಿದರು. ಹೌದು, ನಾನು ಆ ಮಾತನ್ನು ಒಪ್ಪುತ್ತೇನೆ. ಅಂದಿನ ಸರ್ಕಾರಕ್ಕೆ ನೈತಿಕ ಹಕ್ಕು ಇದ್ದರೆ, ನಾವು ವಿಶ್ವಾಸವನ್ನು ಕಳೆದುಕೊಂಡಿದ್ದೇವೆಂಬ ಭಾವನೆ ನಿಮಗೆ ಇದ್ದಿದ್ದರೆ, ಮಾನ್ಯ ರಾಜ್ಯಪಾಲರಿಗೆ ನೀವು ಬಂದು ಭಾಷಣವನ್ನು ಮಾಡಬೇಡಿ, ಸಂವಿಧಾನ ಬಾಹಿರವಾಗುತ್ತದೆ. ನಾವು ವಿಶ್ವಾಸಮತವನ್ನು ಸಾಬೀತು ಮಾಡುತ್ತೇವೆ. ಅನಂತರ ತಾವು ಬಂದು ಭಾಷಣವನ್ನು ಮಾಡಿ ಎಂದು ಹೇಳಬಹುದಿತ್ತಲ್ಲಾ? ಅದನ್ನು ಏಕೆ ಮಾಡಲಿಲ್ಲ? . . . . .

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ರಾಮಸ್ವಾಮಿಯವರೇ, ತಾವು ಸ್ವಲ್ಪ ಈಲ್ಡ್ ಆಗುತ್ತಿರಾ? ತಾವು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ನಾನು ಇಲ್ಲದ್ದನ್ನು ಹೇಳಿಲ್ಲ, ನಾನು ಉಲ್ಲೇಖ ಮಾಡಿ ಹೇಳಿದೆ ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ ನಾನು ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ತಾವು ಆಮೇಲೆ ಮಾತನಾಡಿ.

Sri K.R. Ramesh Kumar: I am only appealing to you. ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಸ್ವಾಮಿಯವರಿಗೆ ತಮ್ಮ ಮುಖಾಂತರ ಒಂದೇ ಒಂದು ಕ್ಷಣ ಈಲ್ಡ್ ಆಗುವಂತೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಸಾರಿ ನನಗೆ ಮಧ್ಯೆ ಡಿಸ್ಟರ್ಬ್ ಆಗುತ್ತದೆ ಸಾರ್.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಒಂದೇ ನಿಮಿಷ ಈಲ್ಡ್ ಆಗಿ ಎಂದು ಕೇಳುತ್ತೇನೆ. ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಇಲ್ಲಿ ಏನಾಗಿದೆಯೆಂದರೆ, "ಅವರವರ ಭಾವಕ್ಕೆ, ಅವರವರ ಭಕುತಿಗೆ ತಕ್ಕಂತೆ" ನಾವು ಚರ್ಚೆ ಮಾಡಿಕೊಂಡು ಹೋಗುತ್ತಿದ್ದೇವೆ. ನಾನು ಅಪೇಕ್ಷಿತನಲ್ಲ, ನಿಮಗೂ ಗೊತ್ತಿದೆ. ನನಗೆ ಕುರ್ಚಿಯ ಆಸೆ ಇಲ್ಲ. ನಾನು ನಿಮ್ಮನ್ನು ಹತ್ತಿರದಿಂದ ನೋಡಿದ್ದೇನೆ. ಏಕೆ? ನಿಮಗೆ ಆ ಆಸೆ ಇರಬಹುದು. ನಾನು ಅವತ್ತೇ ಹೇಳಿದೆ ಮೀನನ್ನು ತೆಗೆದು ದಡಕ್ಕೆ ಹಾಕಿದಾಗ ಅದು ಹೇಗೆ ವಿಲವಿಲನೆ ಒದ್ದಾಡುತ್ತದೆ ಹಾಗೆ ಒದ್ದಾಡುತ್ತಿರಬಹುದು. ನನಗೆ ಆ ಅಪೇಕ್ಷೆ, ಆ ಉತ್ಕಟಾಕಾಂಕ್ಷೆ ಇಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ, ನೀವು ಮಾತನಾಡುವಾಗ ಮಾತನಾಡಿ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಜನವರಿ 27ನೇ ತಾರೀಖು ಈ ಸದನದಲ್ಲಿ...

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಅವರು ನನ್ನ ಭಾಷಣಕ್ಕೆ ಅಡಚಣೆ ಮಾಡಿದರೆ, ಮುಂದೆ ಅವರು ಭಾಷಣ ಮಾಡುವಾಗ ನಾನು ಅಡಚಣೆ ಮಾಡಬೇಕಾಗುತ್ತದೆ. ನಾನು ಆಗಲೇ ಮನವಿ ಮಾಡಿಕೊಂಡೆ, ಬೇರೆ ಯಾರು ಮಾತನಾಡುವಾಗಲೂ ನಾನು ಎದ್ದು ಎಂದೂ ಇಂಟರ್‌ಫಿಯರ್ ಮಾಡಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಪುನರ್‌ಪರಿಶೀಲನೆ ವಿಚಾರ ಬಿಟ್ಟು ಬೇರೆಯದನ್ನು ಮಾತನಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಈಗ ರಾಮಸ್ವಾಮಿಯವರು ಮಾತನಾಡುತ್ತಿದ್ದಾರೆ. ನೀವು ಕುಳಿತುಕೊಂಡು ಅವರ ಮಾತನ್ನು ಕೇಳಿ. ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ. ಆಗ ಅದಕ್ಕೆ ಉತ್ತರ ಕೊಡಿ. ಪದೇಪದೇ ನಿಂತುಕೊಂಡು ಮಾತನಾಡಿದರೆ ಹೇಗೆ? ಗೊಂದಲವಾಗುತ್ತದೆ, ಪ್ರಯೋಜನವಾಗುವುದಿಲ್ಲ.

ಶ್ರೀ ಬಿ. ಶಿವರಾಮು: ಮರುಪರಿಶೀಲನೆ ವಿಚಾರ ಬಿಟ್ಟು ರಾಜಕೀಯವನ್ನು ಮಾತನಾಡುತ್ತಿದ್ದಾರೆ, ರಾಜಕೀಯ ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಆಯಿತು, ಅದನ್ನು ನೀವು ಹೇಳಿ. ಈಗ ಅವರ ಅಭಿಪ್ರಾಯವನ್ನು ಕೇಳಿ. ರಾಮಸ್ವಾಮಿಯವರೇ, ಮಾತನಾಡಿ.

ಶ್ರೀ ದಿನೇಶ್ ಗುಂಡೂರಾವ್: ಥ್ಯಾಂಕ್ಸ್ ಮೋಷನ್ ಬಗ್ಗೆ ಮಾತನಾಡಿ.

ಶ್ರೀ ಎ.ಟಿ. ರಾಮಸ್ವಾಮಿ: ಥ್ಯಾಂಕ್ಸ್ ಮೋಷನ್ ಬಗ್ಗೆಯೇ ಹೇಳುತ್ತಿರುವುದು. ಸಂವಿಧಾನಕ್ಕೆ ಎಲ್ಲಿ ಅಪಚಾರವಾಗಿದೆ ಎನ್ನುವುದರ ಬಗ್ಗೆ ನಾನು ಹೇಳುತ್ತಿರುವುದು. 27ನೇ ತಾರೀಖು ಅಂದಿನ ಮುಖ್ಯಮಂತ್ರಿಗಳು, ಇಂದಿನ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ವಿಶ್ವಾಸ ಮತ ಯಾಚನೆ ಮಾಡಿದರು. ಆ ಸಂದರ್ಭದಲ್ಲಿ, ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದಂಥ ಮಂತ್ರಿಗಳೇ ಹೋಗಿ ಬಾವಿಯಲ್ಲಿ ನಿಂತುಕೊಂಡು ಧಿಕ್ಕಾರ ಕೂಗಿದರು. ಇದು ಅವರು ಸಂವಿಧಾನಕ್ಕೆ ಕೊಟ್ಟಂಥ ಗೌರವ!

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಮಾಡಿದ ಇವರು ಕೂಗಿದರೆ ಅದು ಅಪಚಾರವಲ್ಲ. ನಾವು ಮಾಡುವುದು ಸಂವಿಧಾನದ ಉಲ್ಲಂಘನೆಯಾಗುತ್ತದೆ. ಸಂವಿಧಾನದ ಉಲ್ಲಂಘನೆ ಮಾಡಬೇಕು ಎಂದು ಸಮರ್ಥಿಸಿಕೊಳ್ಳಲು ನಾನು ಇಲ್ಲಿ ನಿಂತಿಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ, ನಂತರ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಸಂವಿಧಾನಕ್ಕೆ ಅಪಚಾರವಾಗಿದೆ ಎನ್ನುವ ಮಾತನ್ನು ಹೇಳಿ, ಸಂವಿಧಾನದ ಉಲ್ಲಂಘನೆ ಮಾಡಬೇಕು ಎನ್ನುವುದನ್ನು ಸಮರ್ಥನೆ ಮಾಡಲು ನಾನು ನಿಂತಿಲ್ಲ. ನಾವು ಸಂವಿಧಾನಕ್ಕೆ ಗೌರವ ಕೊಡಬೇಕು. ಆರ್ಟಿಕಲ್ 176(1)ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಭಾಷಣ ಮಾಡಿದ್ದಾರೆ. ಇಲ್ಲಿ ಆ ಬಗ್ಗೆ ಚರ್ಚೆಯಾದ ಮೇಲೆ ನಾನು ಪುಸ್ತಕವನ್ನು ಓದಿದೆ. ನೀವು ಬೆಳಕು ಚೆಲ್ಲಿದಿರಿ. ಅದಕ್ಕೆ ನಾನು ಆಗಲೇ ಹೇಳಿದೆ, ನಾನು ಸ್ವಾಗತ ಮಾಡುತ್ತೇನೆ ಎಂದು. ಆದರೆ ಸಂವಿಧಾನದಲ್ಲಿ ಎಲ್ಲಿಯೂ ಕೂಡ, ರಾಜ್ಯಪಾಲರು ಭಾಷಣ ಮಾಡಿದ ಮೇಲೆ ವಂದನೆ ಸಲ್ಲಿಸಿ ಎಂದು ಇಲ್ಲ. ಅದನ್ನು ನಾವು ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಬುಕ್‌ನಲ್ಲಿ ಮಾಡಿಕೊಂಡಿದ್ದೇವೆ. ನಾನು ಓದಿದ್ದೇನೆ. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ: ನಮ್ಮ ರೂಲ್ಸ್‌ನಲ್ಲಿ ಅದನ್ನು ನಾವು ಮಾಡಿ ಕೊಂಡಿದ್ದೇವೆ ಎಂದು ಹೇಳುತ್ತಿದ್ದೇನೆ. ನನ್ನ ಮಾತನ್ನು ಕೇಳಿ. ಆ ರೂಲ್ಸ್‌ನಲ್ಲಿ ನಾವು ಮಾಡಿಕೊಂಡಿದ್ದೇವೆ. ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ ಮೇಲೆ ವಂದನೆ ಸಲ್ಲಿಸಬೇಕು ಎಂದು ಆರ್ಟಿಕಲ್ 176ರಲ್ಲಿ ಹೇಳಿಲ್ಲ, ವಂದನೆ ಸಲ್ಲಿಸಬೇಕು ಎಂದು ನಮ್ಮ ರೂಲ್ಸ್‌ನಲ್ಲಿ ನಾವು ಮಾಡಿಕೊಂಡಿದ್ದೇವೆ. ನಾನು ಒಪ್ಪಿಕೊಳ್ಳುತ್ತಿದ್ದೇನೆ, ನಾನೂ ಹೇಳುತ್ತಿದ್ದೇನೆ. ಆದರೆ ಆರ್ಟಿಕಲ್ 175(1)ರಲ್ಲಿ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಬಹುದು. ಆದರೆ ಅದಕ್ಕೆ ವಂದನೆ ಸಲ್ಲಿಸುವುದನ್ನು ನಮ್ಮ ರೂಲ್ಸ್‌ನಲ್ಲಿ ಮಾಡಿಕೊಂಡಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಗಳು ಬಂದಾಗ ನಮ್ಮ ಅಧ್ಯಕ್ಷರು ನಿರ್ಧಾರ ತೆಗೆದುಕೊಳ್ಳತಕ್ಕಂಥ ಅಧಿಕಾರವನ್ನು ಆ ರೂಲ್ಸ್‌ನಲ್ಲಿ ಕೊಟ್ಟಿದ್ದೇವೆ. ಅದನ್ನು ಬಳಕೆ ಮಾಡಿ ನೀವು ನಿರ್ಣಯ ಕೊಡಬೇಕು. 19ನೇ ತಾರೀಖು ಇಲ್ಲಿ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಿ ಹೋಗಿದ್ದಾರೆ. ಅದಕ್ಕೆ ವಂದನಾ ನಿರ್ಣಯದ ಸೂಚನೆಯನ್ನು ಮಂಡಿಸುವವರು ಯಾರು? ಆ ಸೂಚನೆಯನ್ನು ಮಂಡಿಸಿಯೇ ಇಲ್ಲ. ಅದು ಅನುಮೋದನೆಯಾಗಿಲ್ಲ.

(ಗೊಂದಲ)

ಅದನ್ನು ಇಲ್ಲಿ ಚರ್ಚೆ ಮಾಡಲು ಬರುತ್ತದೆಯೇ? ಅದಕ್ಕಾಗಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಮ್ಮ ಸಂವಿಧಾನದ, ರಾಜ್ಯದ ಮುಖ್ಯಸ್ಥರಾಗಿರತಕ್ಕಂಥ ಮಾನ್ಯ ರಾಜ್ಯಪಾಲರು ಇಲ್ಲಿಗೆ ಬಂದು ಭಾಷಣ ಮಾಡಿಕೊಟ್ಟು ಹೋಗಿದ್ದಾರೆ. ಅವರಿಗೆ ವಂದನೆ ಸಲ್ಲಿಸತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ 19ನೇ ತಾರೀಖು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ಉಪೇಕ್ಷೆ ಮಾಡಿ, 24ನೇ ತಾರೀಖು ಮಾಡಿದಂಥ ಭಾಷಣಕ್ಕೆ ವಂದನೆ ಸಲ್ಲಿಸಲು ದಯವಿಟ್ಟು ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಈಗ ಮಾನ್ಯ ಕೃಷ್ಣಬೈರೇಗೌಡರು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್. ಆಂಜನೇಯರವರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು: ತಮಗೂ ಅವಕಾಶ ಕೊಡುತ್ತೇನೆ, ಈಗ ಅವರು ಮಾತನಾಡಲಿ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ಮಾನ್ಯ ಸಭಾನಾಯಕರು ಉತ್ತಮವಾದಂಥ ವಿಚಾರವನ್ನು ತಮ್ಮ ಹಾಗೂ ನಮ್ಮೆಲ್ಲರ ಗಮನಕ್ಕೆ ತಂದಿದ್ದಾರೆ. ರಾಜ್ಯದಲ್ಲಿ ಆಗಬೇಕಾಗಿರತಕ್ಕಂಥ ಅಭಿವೃದ್ಧಿ ಕಾಮಗಾರಿಗಳು ಸಾಕಷ್ಟು ಇವೆ, ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳಿವೆ, ಅದರ ಬಗ್ಗೆ ನಾವೆಲ್ಲರೂ ಹೆಚ್ಚಿಗೆ ಗಮನ ಕೊಡೋಣ ಎಂದು ಮನವಿಯನ್ನೂ ಸಹ ಎಲ್ಲಾ ಸದಸ್ಯರಲ್ಲಿ ಮಾಡಿದ್ದಾರೆ. ಅವರಿಗೆ ಸಂಪೂರ್ಣ ಸಹಕಾರ ಕೊಡಲು ನಾವಂತೂ ಬದ್ಧರಾಗಿ, ಸಿದ್ಧರಾಗಿ ನಿಂತಿದ್ದೇವೆ. ಆದರೆ ಈ ಒಂದು ರೀತಿಯ ಹಠಮಾರಿತನ ಏನಿದೆ, ಇದರಿಂದ ರಾಜ್ಯಕ್ಕೆ ಹಾನಿಯಾಗುತ್ತದೆ ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯ. ಸಹಕಾರ ಕೊಡುವ ವಿಷಯದಲ್ಲಿ ನಾವು ಸಂಪೂರ್ಣವಾಗಿ ಸನ್ನದ್ಧರಾಗಿದ್ದೇವೆ. ಆದರೆ ಇವತ್ತು ಸಂವಿಧಾನದ ಪ್ರಶ್ನೆ ನಮ್ಮ ನಿಮ್ಮೆಲ್ಲರ ಮುಂದೆ ಇದೆ. ನಾನು ಆದಷ್ಟೂ ಸೂಕ್ಷ್ಮವಾಗಿ ಒಂದು ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಆರ್ಟಿಕಲ್ 176(1)ರ ಅಡಿಯಲ್ಲಿ ಮಾನ್ಯ ರಾಜ್ಯಪಾಲರು, ಕ್ಯಾಬಿನೆಟ್‌ನಿಂದ ಅಪ್ರೂವ್ ಆದಂಥ ಭಾಷಣವನ್ನು ಈ ಸದನದಲ್ಲಿ ಬಂದು ಮಾಡಿದಾಗ ಅದಕ್ಕೆ ವಂದನೆಯನ್ನು ಅರ್ಪಿಸತಕ್ಕಂಥಾದ್ದು ನಮ್ಮ ಕರ್ತವ್ಯ. ಅದು ನಿಯಮ. ಅದನ್ನು ನಾವು ಉಲ್ಲಂಘನೆ

ಮಾಡುವುದಕ್ಕಾಗುವುದಿಲ್ಲ. ಆದರೆ ಇವತ್ತು ನಾವು ಹೊಸ ಸಂಪ್ರದಾಯವನ್ನು ಶುರು ಮಾಡಲಿಕ್ಕೆ ಹೊರಟಿದ್ದೇವೆ. ಹೊಸ ಸಂಪ್ರದಾಯ ಎಂದೇ ಇಟ್ಟುಕೊಳ್ಳೋಣ. ಆರ್ಟಿಕಲ್ 175(1)ರ ಅಡಿಯಲ್ಲಿ ಮಾಡಿದ ಭಾಷಣಕ್ಕೂ ಕೂಡ ನಾವು ವಂದನೆಯನ್ನು ಅರ್ಪಿಸುತ್ತೇವೆ ಎನ್ನುವ ಸಂಪ್ರದಾಯವನ್ನು ನಾವು ಇವತ್ತು ಶುರು ಮಾಡುತ್ತಿದ್ದೇವೆ. ಇದರಿಂದ ಮುಂದೆ ಏನಾಗಬಹುದು ಎಂದು ನನ್ನ ಮನಸ್ಸಿನಲ್ಲಿದ್ದುದನ್ನು ಮಾನ್ಯ ಮಾಧುಸ್ವಾಮಿಯವರು ಸೂಕ್ಷ್ಮವಾಗಿ ಹೇಳಿದರು. ಅದನ್ನೇ ಸ್ವಲ್ಪ ಬಿಡಿಸಿ ಹೇಳಲು ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ. ಕಳೆದ ವರ್ಷ ನಮ್ಮಲ್ಲಿ ಸಾಕಷ್ಟು ಮಳೆಯಾಯಿತು. ಇನ್ನೈದು ವರ್ಷಕ್ಕೆ ಪುನಃ ನಮಗೆ ಬರಗಾಲ ಬರುತ್ತದೆ ಎಂದು ಇಟ್ಟುಕೊಳ್ಳಿ. ಕಾವೇರಿ ನದಿ ಮತ್ತೆ ಬತ್ತಿ ಹೋಗುತ್ತದೆ ಎಂದು ಇಟ್ಟುಕೊಳ್ಳಿ. ಆಗ ಮತ್ತೆ ತಮಿಳುನಾಡಿಗೂ ನಮಗೂ ನೀರಿಗಾಗಿ ತಿಕ್ಕಾಟ ಬರುತ್ತದೆ. ಆವತ್ತು ನಮ್ಮ ರಾಜ್ಯದಲ್ಲಿ ಯಾರೋ ಒಬ್ಬರು ಗೌರವಾನ್ವಿತ ರಾಜ್ಯಪಾಲರು ಇರುತ್ತಾರೆ. ಆಗ ಅವರು ಬಂದು ಆರ್ಟಿಕಲ್ 75(1)ರಡಿ ನಮ್ಮ ರಾಜ್ಯಕ್ಕೆ ಅಪ್ಯಾಯಮಾನವಾದಂಥ ಒಂದು ಭಾಷಣವನ್ನು ಈ ಸದನದಲ್ಲಿ ಮಾಡಿದಾಗ, ಆವತ್ತಿನ ಸರ್ಕಾರ ಅದಕ್ಕೆ ವಂದನೆಯನ್ನು ಅರ್ಪಿಸಬೇಕಾಗುತ್ತದೆ. ಅದಕ್ಕೆ ತಾವು ತಯಾರಿದ್ದೀರಾ? ತಾವು ಮಂಡ್ಯ ಜಿಲ್ಲೆಯವರಿದ್ದೀರಿ. ಮಾನ್ಯ ಸಭಾನಾಯಕರು ರೈತರ ಹಿನ್ನೆಲೆಯಿಂದ ಬಂದಂಥವರಾಗಿದ್ದಾರೆ.

ಶ್ರೀ ಬಿ.ಸಿ. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಆ ಪರಿಸ್ಥಿತಿ ಬಂದಾಗ ನೋಡಿಕೊಳ್ಳೋಣ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ: ಆವತ್ತು ನಮಗೆ ಬೇರೆ ವಿಧಿ ಇರುವುದಿಲ್ಲ. ವಂದನಾ ನಿರ್ಣಯವನ್ನು ಮಂಡಿಸಿ ವಂದನೆಯನ್ನು ಅರ್ಪಿಸಲೇಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ವಿರುದ್ಧವಾಗಿದ್ದರೂ ಸಹ ಅದಕ್ಕೆ ವಂದನೆಯನ್ನು ಅರ್ಪಿಸಬೇಕಾಗುತ್ತದೆ. ಅದಕ್ಕೆ ತಾವು ತಯಾರಿದ್ದೀರಾ ಎಂದು ನಾನು ಮಾನ್ಯ ಆಡಳಿತ ಪಕ್ಷವನ್ನು ಮತ್ತು ಆಡಳಿತ ಪಕ್ಷದ ಸದಸ್ಯರನ್ನು ಕೇಳಲು ಬಯಸುತ್ತೇನೆ. ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಇವತ್ತು ನಮ್ಮನ್ನು ನಾವು ಸಿಕ್ಕಿಹಾಕಿಸಿಕೊಳ್ಳುತ್ತಿದ್ದೇವೆ. ಮುಂದೆಯೂ ರಾಜ್ಯಕ್ಕೆ ಸಂದೇಶವನ್ನು ಕೊಡತಕ್ಕಂಥ ಸಂಪೂರ್ಣ ಹಕ್ಕನ್ನು ರಾಜ್ಯಪಾಲರು ಹೊಂದಿದ್ದಾರೆ. ಅವರು ಯಾವುದೇ ಒಂದು ಸಂದರ್ಭದಲ್ಲಿ ಸಂದೇಶ ಕೊಡುತ್ತೇನೆ ಎಂದು ಹೇಳಿದಾಗ, ಅದಕ್ಕೆ ನಾವಾಗಲೀ, ತಾವಾಗಲೀ ಇಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಆದರೆ ಅದನ್ನು ಚರ್ಚೆಗೆ ತೆಗೆದುಕೊಳ್ಳತಕ್ಕಂಥಾದ್ದು, ಬಿಡತಕ್ಕಂಥದ್ದು ನಿಮ್ಮ ವಿವೇಚನೆಗೆ ಬಿಟ್ಟಂಥಾದ್ದು. ಆದರೆ ಇವತ್ತು ನಾವು ಒಂದು ಸಂಪ್ರದಾಯವನ್ನು ಸೃಷ್ಟಿ ಮಾಡಿದಾಗ, ನಾಳೆ ನಾವು ಅದೇ ಸಂಪ್ರದಾಯವನ್ನು ಅನುಸರಿಸಬೇಕಾಗುತ್ತದೆ. ಹಾಗೆ ಅನುಸರಿಸಿದಾಗ, ಮತ್ತೆಮತ್ತೆ ನಾವು ಇಂಥ ಒಂದು ಇಕ್ಕಟ್ಟಿಗೆ, ಇಂಥ ಒಂದು ದುಸ್ಥಿತಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ. ಏಕೆ ಈ ವಿಷಯದ ಬಗ್ಗೆ ನಾವು ಇಷ್ಟು ಪಟ್ಟುಹಿಡಿದಿದ್ದೇವೆ, ಇಂಥ ಒಂದು ಕೆಟ್ಟ ಸಂಪ್ರದಾಯ ಶುರು ಆಗಬಾರದು ಎಂದು. ಈ ರೀತಿಯ ಸಂದರ್ಭಗಳು ಮುಂದಿನ ದಿನಗಳಲ್ಲಿ ಬರಬಾರದು ಎನ್ನುವ ಒಂದು ಏಕೈಕ ಉದ್ದೇಶದಿಂದ ನಾವು ಇದನ್ನು ತಮಗೆ ಮತ್ತೆಮತ್ತೆ ಅತ್ಯಂತ ವಿನಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ನಿಮ್ಮನ್ನು ಧಿಕ್ಕರಿಸಬೇಕು ಎಂದಾಗಲೀ ಅಥವಾ ಬೇರೆ ಯಾವುದೇ ಉದ್ದೇಶವಾಗಲೀ ನಮಗಿಲ್ಲ. ಜನವರಿ 19ನೇ ತಾರೀಖಿನ ಭಾಷಣವನ್ನು infructuous ಎಂದು ತಾವು ತೀರ್ಮಾನವನ್ನು ಕೊಟ್ಟಿದೀರಿ. ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಆ ತೀರ್ಪು ಕೊಡುವುದಕ್ಕೆ ತಮಗೆ ಸಂಪೂರ್ಣ ಹಕ್ಕು ಇದೆ. ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ಆದರೆ 24ನೇ ತಾರೀಖಿನ ಭಾಷಣಕ್ಕೆ ವಂದನಾ ನಿರ್ಣಯವನ್ನು

ಅರ್ಪಿಸಬೇಕು ಎಂದು ಕೊಟ್ಟಿರುವ ತೀರ್ಮಾನವನ್ನು ತಾವು ಮರುಪರಿಶೀಲನೆ ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಂಡು, ಚರ್ಚೆಗೆ ಅವಕಾಶ ಕೊಡಿ. ನಾವೂ ಸಹ ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಎಂದೇ ಇವತ್ತು ಇಲ್ಲಿಗೆ ಬಂದಿರುವುದು. ತಮ್ಮ ಜೊತೆಗೆ ನಾವೂ ಸೇರಿ ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡೋಣ. ರಾಜ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯೋಣ; ಮಾನ್ಯ ರಾಜ್ಯಪಾಲರು ಆರ್ಟಿಕಲ್ 175(1) ರಡಿಯಲ್ಲಿ ಕೊಟ್ಟಿರುವ ಸಂದೇಶದ ಮೇಲೆ ನಾವೂ ಸಹ ಚರ್ಚೆಯಲ್ಲಿ ಭಾಗವಹಿಸುತ್ತೇವೆ. ನಾನು ಹೆಚ್ಚಿಗೆ ಒತ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಮುಂದಿನ ದಿನಗಳಲ್ಲಿ ಇಂಥ ಸಂದಿಗ್ಧ ಪರಿಸ್ಥಿತಿಗೆ ಈ ತೀರ್ಮಾನ ನಮ್ಮನ್ನು ಸಿಕ್ಕಿಸುತ್ತದೆ. ಹಾಗಾಗಿ ಅದಕ್ಕೆ ಅವಕಾಶ ಮಾಡಿಕೊಡಬೇಡಿ. ದಯವಿಟ್ಟು ತಮ್ಮಲ್ಲಿ ಸವಿನಯವಾಗಿ ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ. ತಮ್ಮ ತೀರ್ಪನ್ನು ಮರು ಪರಿಶೀಲನೆ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ, ನಾವೂ ಸಹ ಸದನದ ಚರ್ಚೆಯಲ್ಲಿ ಭಾಗವಹಿಸುತ್ತೇವೆ, ಇದರಿಂದ ಸರ್ಕಾರಕ್ಕೂ ಸಹ ಶೋಭೆಯನ್ನು ತರುತ್ತದೆ. ಮಾನ್ಯ ಸಭಾನಾಯಕರು ಬಹಳ ಸಹನೆಯಿಂದ ನಮ್ಮೆಲ್ಲರನ್ನೂ ಸಹ ಜೊತೆಗೆ ತೆಗೆದುಕೊಂಡು ಹೋದರೆ ಅವರಿಗೂ ಸಹ ಸರ್ಕಾರವನ್ನು ನಡೆಸಲಿಕ್ಕೆ ನಾವು ಸಂಪೂರ್ಣ ಸಹಕಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೂ ಸಹ ತಮ್ಮ ಮುಖಾಂತರ ಮನವಿಯನ್ನು ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಧನ್ಯವಾದಗಳು.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತು ಹೇಳಿ ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನನ್ನನ್ನು ಮಾನ್ಯ ಅಧ್ಯಕ್ಷರು ಕರೆದಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ: ಒಂದ್ನಿಮಿಷ. ನಿಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಒಂದೇ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನೇ ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಆ ನಂತರ ನೀವು ಹೇಳಿ.

ಶ್ರೀ ಎನ್. ಚಲುವರಾಯಸ್ವಾಮಿ: ಒಂದೇ ಒಂದು ನಿಮಿಷ ಸಾರ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಏನಪ್ಪಾ ನೀವು. ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದಾರೆ. ಒಂದು ನಿಮಿಷ ನೀವು ಕುಳಿತುಕೊಳ್ಳಿ.

ಶ್ರೀ ಎನ್. ಚಲುವರಾಯಸ್ವಾಮಿ: ತಪ್ಪು ತಿಳಿದುಕೊಳ್ಳಬೇಡಿ. ದಯಮಾಡಿ ಒಂದು ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರ ಮೂಲಕ ನಿಮ್ಮಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ. ದಯವಿಟ್ಟು ಒಂದು ನಿಮಿಷ ನೀವು ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಇವರೆಲ್ಲಾ ಮಾತನಾಡಿದ ಯಾವುದೇ ವಿಚಾರವನ್ನು ನಾನೀಗ ಮಾತನಾಡುತ್ತಿಲ್ಲ. ನಿಮ್ಮ ತೀರ್ಪನ್ನು ಮರುಪರಿಶೀಲನೆ ಮಾಡಿ ಎಂದೂ

ಕೂಡ ನಾನು ನಿಮ್ಮನ್ನು ವಿನಂತಿ ಮಾಡಿಕೊಳ್ಳುತ್ತಿಲ್ಲ. ಅಥವಾ ನೀವು ಮಾಡಿರುವುದು ಸರಿ ಎಂದೂ ಸಹ ನಾನು ಹೇಳುವುದಿಲ್ಲ. ನಾನು ಬೇರೆ ವಿಚಾರದ ಬಗ್ಗೆ ಹೇಳುತ್ತೇನೆ. ಒಂದನೆಯದಾಗಿ, ಇಲ್ಲಿ ಡಾ: ಅಂಬೇಡ್ಕರ್‌ರವರ ಫೋಟೋ ಇದೆ. ಅವರು ಬರೆದಂಥ ಸಂವಿಧಾನವನ್ನು ಎತ್ತಿ ಹಿಡಿದಂಥ ಜನರ ಫೋಟೋಗಳನ್ನು ಇಲ್ಲೆಲ್ಲಾ ನಾವು ಹಾಕಿಕೊಂಡಿದ್ದೇವೆ. ನಮಗೆ ಏನಾದರೂ ಆತ್ಮ ಎನ್ನುವಂಥದ್ದು ಇದ್ದರೆ, ನಾವೆಲ್ಲರೂ ಸಂವಿಧಾನದ ಪ್ರಕಾರ ಪ್ರಮಾಣವಚನ ಸ್ವೀಕಾರ ಮಾಡಿ, ನೀವೂ ನಾವೂ ಸೇರಿ ಇಲ್ಲಿಗೆ ಬಂದಿದ್ದೇವೆ. ನನ್ನ ಪ್ರಶ್ನೆ ಏನೆಂದರೆ, ಸಂವಿಧಾನದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿ ಬಂದಂಥ ನಾವು ಯಾರೂ ಕೂಡ ಆ ಸಂವಿಧಾನದ ಉಲ್ಲಂಘನೆ ಆಗತಕ್ಕಂಥ ಪರಿಸ್ಥಿತಿಯನ್ನು ಈ ಸದನದಲ್ಲಿ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಅದರಲ್ಲಿ compromise ಇಲ್ಲ. ರಾಜಿ ಪ್ರಶ್ನೆ ಇಲ್ಲ. ಸಂವಿಧಾನದ ಬಗ್ಗೆ ruling ಕೊಡಲಿಕ್ಕೆ ಯಾರಿಗೂ ಅಧಿಕಾರವಿಲ್ಲ. ನಿಮ್ಮ rules, ನಿಮ್ಮ regulations ಬಗ್ಗೆ Speaker ಗೆ ಅಧಿಕಾರವಿದೆ. ನೀವು ಏನು ಬೇಕಾದರೂ ruling ಕೊಡಿ. That is your authority. But, nobody in this House is having authority to give a ruling on the Constitutional matters. ಅದು ಆಗಬಾರದು ಎನ್ನತಕ್ಕಂಥದ್ದೇ ನಮ್ಮ ಅಭಿಪ್ರಾಯವಾಗಿದೆ. ಏಕೆಂದರೆ, ನಮಗೆ ಓಟು ಹಾಕಿ ಕಳುಹಿಸಿದಂಥ ಜನರು ಇಲ್ಲಿ ಕುಳಿತಿದ್ದಾರೆ. ಆಚೆಕಡೆ ಕಾನೂನು ಪಂಡಿತರು ಕುಳಿತಿದ್ದಾರೆ. ಜಡ್ಜ್‌ಗಳು ಇದ್ದಾರೆ, ಹೈಕೋರ್ಟ್ ಇದೆ, ಸುಪ್ರೀಂಕೋರ್ಟ್ ಇದೆ, ಈ ಸದನದಲ್ಲಿ ಕುಳಿತಿರುವ ಶಾಸಕರಾದಂಥ ನಾವು ಶಾಸನವನ್ನು ರಚನೆ ಮಾಡತಕ್ಕಂಥ ನಾವು ಸಂವಿಧಾನದ ಹೆಸರಿನಲ್ಲಿ ಸಂವಿಧಾನವನ್ನು ಎತ್ತಿಹಿಡಿಯುತ್ತೇವೆಂದು ಹೇಳಿ ಪ್ರಮಾಣವಚನ ಸ್ವೀಕಾರ ಮಾಡಿ ಬಂದಂಥ ನಾವು ಆ ಸಂವಿಧಾನದ ಯಾವುದೇ ಒಂದು ಅಂಶ ಉಲ್ಲಂಘನೆ ಆಗಲಿಕ್ಕೆ ಅವಕಾಶ ಮಾಡಿಕೊಟ್ಟರೆ, ನಾವು ಈ ಸದನದಲ್ಲಿ ಒಂದು ಕ್ಷಣವೂ ಕೂಡ ಸದಸ್ಯರಾಗಿ ಇರಲಿಕ್ಕೆ ಅರ್ಹರಲ್ಲ. (ಗೊಂದಲ) ಏನಾಯಿತು? This is intolerable. ಎರಡನೆಯದಾಗಿ, ಇವರೆಲ್ಲರಲ್ಲಿ ಒಂದು feeling ಇದೆ. Ruling party ಯ ವಿರುದ್ಧ ಈಗ ನಮಗೂ ನಿಮಗೂ ತಕರಾರು ಇಲ್ಲ. (ಗೊಂದಲ) ನಮ್ಮ ತಕರಾರು ಇಲ್ಲ. ನಿಮಗೂ ನಮಗೂ ತಕರಾರು ಅಲ್ಲ. ನಮಗೂ ಅವರಿಗೂ ತಕರಾರು ಇರತಕ್ಕಂಥ ವಿಷಯ ಇದು. ದಯವಿಟ್ಟು ನೀವು ಎಂದೂ ಕೂಡ ತಪ್ಪು ತಿಳಿದುಕೊಳ್ಳಬೇಡಿ. ನಿಮಗೂ ನಮಗೂ ತಕರಾರು ನಡೆಯುತ್ತಿದೆ. ನಿಮಗೆ ಅನ್ಯಾಯ ಮಾಡಲಿಕ್ಕೆ ಇಲ್ಲಿ ನಾವು ಮಾತನಾಡುತ್ತಿದ್ದೇವೆ ಎಂದು ತಿಳಿದುಕೊಳ್ಳಬೇಡಿ. ಈ ತಕರಾರು ಇರತಕ್ಕಂಥದ್ದು between us and the Speaker. ಅಷ್ಟೆ.

Sri Jagadish Shetter(Minister for Revenue): Speaker ಎನ್ನುವ ಪ್ರಶ್ನೆ ಬಂದಂಥ ಸಂದರ್ಭದಲ್ಲಿ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಈ ತಕರಾರು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರ ನಡುವೆ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆ ತಕರಾರು ಬಗ್ಗೆ ಮಾತನಾಡಬೇಡಿ. ಸಭಾಧ್ಯಕ್ಷರ ಪೀಠಕ್ಕೆ ಎಲ್ಲರೂ ಗೌರವ ಕೊಡುವಂಥದ್ದು ಆಗಬೇಕು. ಆ ruling ಅನ್ನು ನಾವು ಗೌರವಿಸುವಂಥ ಕೆಲಸ ಮಾಡಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ. ನಾನು yield ಆಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಾನು ಮಾನ್ಯ ಸಭಾಧ್ಯಕ್ಷರಿಗೆ ವಿನಂತಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ ಮಾನ್ಯ ಜಗದೀಶ್ ಶೆಟ್ಟರೆ. ತಾವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಚರ್ಚೆ ಮಾಡುವಂಥದ್ದು ಅದು ಸಂವಿಧಾನ . . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು yield ಆಗಿಲ್ಲ. ನೀವು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು. ನಾನು yield ಆಗಿಲ್ಲ. ನಮ್ಮ ತಕರಾರು ನಿಮ್ಮ ವಿರುದ್ಧ ಅಲ್ಲ. ಸಂವಿಧಾನದ ರಕ್ಷಣೆಗೋಸ್ಕರ ನಮ್ಮ ತಕರಾರು ಅಷ್ಟೆ. ನಮ್ಮದು ಯಾರ ವಿರುದ್ಧವೂ ತಕರಾರು ಇಲ್ಲ ಯಾರ ವಿರುದ್ಧವೂ ದ್ವೇಷವಿಲ್ಲ. ಯಾರ ವಿರುದ್ಧವೂ ಹೋರಾಟವಿಲ್ಲ. ನಮ್ಮ ಹೋರಾಟ ನಮ್ಮ ತಕರಾರು ಇರತಕ್ಕಂಥದ್ದು ಸಂವಿಧಾನವನ್ನು ರಕ್ಷಣೆ ಮಾಡಲಿಕ್ಕೆ ಅಷ್ಟೆ. ಇನ್ನು ಮೂರನೆಯದಾಗಿ, ಮೊನ್ನೆ 27ನೇ ತಾರೀಖು ಸದನ ಪ್ರಾರಂಭವಾದಾಗ ಮೊಟ್ಟಮೊದಲ ಬಾರಿಗೆ ನಾನು ಕ್ರಿಯಾಲೋಪವನ್ನು ಎತ್ತಿದೆ ನಾನು ಕ್ರಿಯಾಲೋಪವನ್ನು ಎತ್ತಿದ್ದು ಯಾವ ಕಾರಣಕ್ಕೆಂದರೆ, ನೀವು ಕೊಟ್ಟಿರತಕ್ಕಂಥ ನೋಟೀಸ್‌ನಲ್ಲಿ ಏನು ಅಂಶ ಒಳಗೊಂಡಿತ್ತು, ರಾಜ್ಯಪಾಲರು ಮಾಡಿದಂಥ ಭಾಷಣದಲ್ಲಿ ಏನು ಅಂಶ ಒಳಗೊಂಡಿತ್ತು? ಇದಕ್ಕೂ ಅದಕ್ಕೂ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ, ಹಾಗಾಗಿ ಇದು ಕ್ರಿಯಾಲೋಪಕ್ಕೆ ಬರುತ್ತದೆನ್ನುವ ಅಂಶವನ್ನು ನಾನು ಪ್ರಸ್ತಾಪ ಮಾಡಿದೆ. ಆದರೆ ನನ್ನ ಕ್ರಿಯಾಲೋಪಕ್ಕೆ ಇವತ್ತಿಗೂ ನೀವು ruling ಕೊಟ್ಟಿಲ್ಲ. ಯಾವ ಪತ್ರಿಕೆಯವರೂ ಸಹ ಆ ಕ್ರಿಯಾಲೋಪದ ಬಗ್ಗೆ ಬರೆಯಲಿಲ್ಲ. ನಾನು ಪ್ರಸ್ತಾಪ ಮಾಡಿದಂಥ ಕ್ರಿಯಾಲೋಪಕ್ಕೆ ನೀವು ಇವತ್ತಿನವರೆಗೂ ruling ಕೊಟ್ಟಿಲ್ಲ. ಬೇರೆ ವಿಚಾರಕ್ಕೆ ನೀವು ruling ಕೊಟ್ಟಿದ್ದೀರಿ. ನಾನು ಆವತ್ತು ಪ್ರಸ್ತಾಪ ಮಾಡಿದಂಥ ಕ್ರಿಯಾಲೋಪಕ್ಕೆ ನೀವು ruling ಕೊಟ್ಟಿಲ್ಲ.

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಆವತ್ತು ಏನು ಕ್ರಿಯಾಲೋಪದ ಮೂಲಕ ಪ್ರಸ್ತಾಪ ಮಾಡಿದಿರಿ, ಅದೇ ರೀತಿಯ ಕ್ರಿಯಾಲೋಪವನ್ನು ಮಾನ್ಯ ಧರ್ಮಸಿಂಗ್‌ರವರೂ ಸಹ ಎತ್ತಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇಲ್ಲ, ಇಲ್ಲ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ದಯವಿಟ್ಟು ಕ್ಷಮಿಸಬೇಕು.

ಅಧ್ಯಕ್ಷರು: ನಾನು ಹೇಳುವುದನ್ನು ಕೇಳಿ ಸ್ವಾಮಿ. ಆ ಕ್ರಿಯಾಲೋಪದ ಮೇಲೆ ಏನು ಚರ್ಚೆ ಇದೆ, ಅದರ ಬಗ್ಗೆ ನನಗೂ ಅವಕಾಶ ಕೊಡಬೇಕು ಎಂದು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ ಮೇಲೆ ಆ ಕಡೆಯವರಿಗೆ, ಈ ಕಡೆಯವರಿಗೆ ಆ ವಿಚಾರಗಳ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟೆ. ಆಗ ಎಲ್ಲಾ ಚರ್ಚೆ ಆದಮೇಲೆ ವಿಸ್ತೃತವಾಗಿ ನಾನು ruling ಕೊಟ್ಟಿದ್ದೇನೆ. 'ನಾನು ಪ್ರಸ್ತಾಪ ಮಾಡಿದ ಕ್ರಿಯಾಲೋಪಕ್ಕೆ ruling ಕೊಟ್ಟಿಲ್ಲವೆಂದು' ತಾವು ಹೇಳುವುದು ಸರಿಯಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ನಾನು ಹೇಳುವುದನ್ನು ದಯವಿಟ್ಟು ಕೇಳಿ. ನಾನು ಕ್ರಿಯಾಲೋಪ ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ಧರ್ಮಸಿಂಗ್‌ರವರು ಎದ್ದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ದಯವಿಟ್ಟು ತಿಳಿದುಕೊಳ್ಳಿ. ನಾನು ಕ್ರಿಯಾಲೋಪ ಪ್ರಸ್ತಾಪ ಮಾಡುವುದಕ್ಕೆ ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ಕ್ರಿಯಾಲೋಪ ಪ್ರಸ್ತಾಪ ಮಾಡಲಿಲ್ಲ. ನಾನು ಎದ್ದು ಕ್ರಿಯಾಲೋಪ ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದಾಗ ಅವರಿಗೆ ಗೌರವ ಕೊಡಬೇಕೆನ್ನುವ ಕಾರಣಕ್ಕೋಸ್ಕರ ನಾನು ಕುಳಿತುಕೊಂಡೆ. ಆವಾಗ ಅವರು ಒಂದು ವಿಚಾರ ಹೇಳಿದರು. ಅದೇನೆಂದರೆ, ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದ ಕ್ರಿಯಾಲೋಪವನ್ನು ನಾನೂ ಸಹ ಪ್ರಸ್ತಾಪ ಮಾಡಬೇಕೆಂದಿದ್ದೆ. ಅವರೇ ಪ್ರಸ್ತಾಪ ಮಾಡಿದ್ದಾರೆಂದು ಹೇಳಿ ಅವರು ಪ್ರಾರಂಭ ಮಾಡಿದರು. ಆವತ್ತು ಇಷ್ಟೇ ಆಗಿರುವಂಥದ್ದು. ಅವರು ಆವತ್ತು ನಾನು ಪ್ರಸ್ತಾಪ ಮಾಡಿದ ಕ್ರಿಯಾಲೋಪದ ಬಗ್ಗೆ ಮಾತನಾಡಿದ್ದಲ್ಲ. ಅವರು ಬೇರೆ ಬೇರೆ ವಿಚಾರಗಳ ಬಗ್ಗೆ ಮಾತನಾಡಿದರು. ನನ್ನ ಕ್ರಿಯಾಲೋಪ ಸ್ಪಷ್ಟವಾಗಿ ಇನ್ನೂ ಹಾಗೆಯೇ ಇದೆ. ಅದರ ಬಗ್ಗೆ ನೀವು ಇನ್ನೂ ಸಹ ruling ಕೊಟ್ಟಿಲ್ಲ. ಆ ಕ್ರಿಯಾಲೋಪದ ಬಗ್ಗೆ ruling ಅನ್ನು ನಮಗೆ ಯಾವ ರೀತಿಯಾದರೂ ಕೊಡಿ. ನಾವು ಅದನ್ನು ಪ್ರಶ್ನೆ ಮಾಡುವುದಿಲ್ಲ. ನಮಗೆ ಆ ಅಧಿಕಾರವೂ ಇಲ್ಲ. ಆದರೆ ಸಂವಿಧಾನದ ವಿಚಾರಗಳಲ್ಲಿ ಯಾರಿಗೂ ruling ಕೊಡತಕ್ಕಂಥ ಅವಕಾಶವಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ವಿಸ್ತೃತವಾಗಿ ಚರ್ಚೆಯಾಗಿದೆ. 17ನೇ ತಾರೀಖು ಹೊಸದಾಗಿ ಬಂದಂಥ ಸರ್ಕಾರ ಕ್ಯಾಬಿನೆಟ್ ಮೀಟಿಂಗ್ ಮಾಡಿ ಆರ್ಟಿಕಲ್ 175ರ ಕೆಳಗಡೆ 'ತಾವು ಬಂದು ಇಲ್ಲಿ ಭಾಷಣ ಮಾಡಬೇಕೆಂದು' ಒಂದು resolution ಅನ್ನು ಮಾಡಿ ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಟ್ಟರು. ಅದಾದಮೇಲೆ ಈ ವಿಚಾರ ನಮಗೆ ಗೊತ್ತಾದ ಮೇಲೆ ನಾವು ಈ ವಿಧಾನಮಂಡಲ, ವತಿಯಿಂದ ನಮ್ಮ ಲೋಕಸಭಾ Secretariat ಗೆ ಒಂದು ಪತ್ರವನ್ನು ಬರೆದೆವು. ಆ ಪತ್ರ ಬರೆದು ನಾವು ಈ ವಿಚಾರವನ್ನು ಹೇಳಿದಾಗ, ಅವರು ನಮಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ.

"Motion of Thanks on the Address by the Governor of Karnataka" Sir, With reference to your letter No. KLCS/Secy/06/06 dated 20.2.2006 on the above subject, I am directed to inform you that there is no instance of a similar nature in Lok Sabha. Since a Motion of Thanks on the Address of the Governor dated 19 January, 2006 could not be moved and discussed by the House, in the changed circumstances, it may, perhaps, be appropriate to move Motion of Thanks on the Address to be made by the Governor on 24 February, 2006 and discuss on the floor of the House." ನಾವು ಈ ವಿಚಾರ ಗೊತ್ತಾದ ಮೇಲೆ 17ನೇ ತಾರೀಖು ಏನು ಮಂತ್ರಿಮಂಡಲದ ಸಭೆ ನಡೆಸಿ Governorರವರನ್ನು 24ನೇ ತಾರೀಖು ಬರಬೇಕೆಂದು ಕೇಳಿಕೊಂಡರು, ನಾವು ಈ provisions ಅನ್ನು ನೋಡಿ clarification ಅನ್ನು ಕೇಳಿದೆವು. ಯಾವುದೇ ವಿಚಾರದಲ್ಲಿ ಲೋಕಸಭೆಯಲ್ಲಿ ಇಂಥ ಘಟನೆಯಾದರೆ, (ಗೊಂದಲ) ನಾನು ಹೇಳುವುದನ್ನು ಸುಮ್ಮನೆ ಕೇಳಿ

(ಗೊಂದಲ) ಆ ಕಾರಣದಿಂದ ನಾವು ಈ ಒಂದು clarification ಕೇಳಿದೆವು. ನಾವು ಯಾವುದಕ್ಕೂ ಲೋಕಸಭಾ ಕಡೆಗೆ ನೋಡುತ್ತೇವೆ. ಆದ್ದರಿಂದ ಈ ತರಹ Motion of Thanks ಅನ್ನು ಮಂಡನೆ ಮಾಡಿ ಮುಗಿಸಿ, ಅದು appropriate ಆಗಿದೆ ಎನ್ನತಕ್ಕದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಷ್ಟೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, ಅದು ಒಂದು ವೇಳೆ ಸರ್ಕಾರದ ಭಾಷಣ ಆಗಿದ್ದರೆ ಅದೇ ತಪ್ಪು. That itself is unconstitutional.

(ಗೊಂದಲ)

ಅಧ್ಯಕ್ಷರು: ಅದನ್ನು ತಮ್ಮ ಗಮನಕ್ಕೆ ತಂದೆ. ಏಕೆಂದರೆ, Constitutional point ತೆಗೆದುಕೊಂಡು discussion ಮಾಡುತ್ತಿದ್ದೀರಲ್ಲಾ, ಅದಕ್ಕೆ, the highest body, ಆ ಲೋಕಸಭಾ secretariat ನವರಲ್ಲಿ ಈ ಆರ್ಟಿಕಲ್ 175 ಮತ್ತು 176 ರ ಬಗ್ಗೆ ನಾವು ಕೇಳಿದೆವು. ಆ ಲೆಟರ್‌ನಲ್ಲಿ ನಾವು ಆರ್ಟಿಕಲ್ 175ರ ಕೆಳಗಡೆ ಕರೆದಿದ್ದಾರೆ, 176ರ ಕೆಳಗಡೆ ಕರೆದಿದ್ದರು, ಎಂದಲ್ಲಿ ಬರೆದ ಮೇಲೆ ಈ ತರಹ ಕೊಟ್ಟಿದ್ದಾರೆ.

ತಮ್ಮ ಅವಗಾಹನೆಗೆ ಅಂದರೆ, ನಿಮಗೇನು ಮುಖಂಡರುಗಳಿಗೆ ಒಳಗಡೆ ಹೇಳಿದ್ದೆ ಅದನ್ನು ಈ ಸಭೆಯ ಅವಗಾಹನೆಗೆ ತರುತ್ತಿದ್ದೇನೆ.

ಮಾನ್ಯ ಸದಸ್ಯರು: ನಾನು ಮೊನ್ನೆ ಇದೇ ಪ್ರಶ್ನೆಯನ್ನು ಕೇಳಿದ್ದೆ, ತಾವು ಉತ್ತರ ಹೇಳಲಿಲ್ಲ ....

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ . . . . . ಖರ್ಗೆ ಸಾಹೇಬರೇ, ಒಂದೇ ಒಂದು ನಿಮಿಷ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ.

ಅಧ್ಯಕ್ಷರು: ಒಳ್ಳೆ ತಮಾಷೆಯಲ್ಲ. ಈ ವಿಚಾರಕ್ಕೆ ಸ್ಪಷ್ಟೀಕರಣ ಕೊಡುವ ಅಗತ್ಯ ಇಲ್ಲವೆ? ನಾವು ಅದನ್ನು ಬರೆದಿದ್ದೆವು. ಅದಕ್ಕೆ ಈ ತರಹ ಬರೆದಿದ್ದಾರೆ. ಓದಿ ಹೇಳಿದೆನಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ. ಒಂದು ನಿಮಿಷ. ಅವರಿಗೆ ಅವಕಾಶ ಕೊಟ್ಟಿದ್ದೀರಾ?

ಶ್ರೀ ಎನ್. ಚಲುವರಾಯಸ್ವಾಮಿ: ಖರ್ಗೆ ಸಾಹೇಬರೆ, ನನಗೆ ಅವಕಾಶ ಕೊಟ್ಟಿದ್ದಾರೆ. ಒಂದು ನಿಮಿಷ . . . . .

ಅಧ್ಯಕ್ಷರು: ನಾನು ಅವರನ್ನು ಕರೆದಿದ್ದೆ. ನೀವು ಮೊದಲು ಮಾತನಾಡುತ್ತೀರಾ? ಅವರು ಹಿರಿಯರು. . . . . . ತಾವು ಮಾತನಾಡಿ. ಚಲುವರಾಯಸ್ವಾಮಿಯವರೆ.

ಶ್ರೀ ಎನ್. ಚಲುವರಾಯಸ್ವಾಮಿ(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಈ ವಿಚಾರವನ್ನು ಈ ಸಂಸ್ಥೆಯ ಗಮನಕ್ಕೆ ತಂದಿದ್ದೀರಿ. ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮುಂದಿನ ಸಾಲಿನಲ್ಲಿ ಕುಳಿತಿರುವ ವಿವಿಧ ಪಕ್ಷದ ಎಲ್ಲಾ ಮುಖಂಡರಿಗೆ ನಾನು ವಿನಂತಿ ಮಾಡಿಕೊಳ್ಳಲಿಚ್ಛೆಪಡುತ್ತೇನೆ. ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೂ ಮತ್ತು ಮುಂದಿನ ಸಾಲಿನಲ್ಲಿ ಕುಳಿತಿರುವ ಪ್ರಮುಖವಾದಂಥ ಮುಖಂಡರಿಗೆ ವಿನಂತಿ ಎಂದು ಹೇಳಿದೆ. ಒಬ್ಬರನ್ನೂ ಬಿಟ್ಟಿಲ್ಲ. ಆದರೆ, ಸ್ಪಷ್ಟವಾಗಿ ಇಲ್ಲಿ ಮಾನ್ಯ ರಾಮಸ್ವಾಮಿಯವರು ಪದೇ ಪದೇ ಹೇಳಿದರು. ಆಗ ಮಧ್ಯೆ ಡಿಸ್ಟರ್ಬ್ ಮಾಡಿದರು. 59 ವರ್ಷಗಳಲ್ಲಿ 40 ವರ್ಷಗಳ ಆಡಳಿತವನ್ನು ಮಾಡಿರುವ ಪಕ್ಷ – ಇವತ್ತು ವಿರೋಧ ಪಕ್ಷದಲ್ಲಿ ಕುಳಿತಿರುವುದು. ನಿನ್ನೆ ಅಥವಾ ಮೊನ್ನೆ ಹೊಸದಾಗಿ ಹುಟ್ಟು ಹಾಕುವ ಪಕ್ಷ ಅಲ್ಲ. ಅಥವಾ ಈ ಸದನದಲ್ಲಿ ಹೊಸದಾಗಿ

ಪ್ರತಿಷ್ಠಾಪಿಸಿದ ಪಕ್ಷ ಅಲ್ಲ. ದಯಮಾಡಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು. ಇದ್ದಾರೆ, ಮಾನ್ಯ ದೇಶಪಾಂಡೆಯವರು ಇದ್ದಾರೆ, ಮಾನ್ಯ ರಮೇಶ್ ಕುಮಾರ್‌ರವರು ಆ ಸ್ಥಾನದಲ್ಲಿ ಕುಳಿತಿದ್ದವರು ಇದ್ದಾರೆ. ದಯಮಾಡಿ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು, ಇವತ್ತು ಆರ್ಟಿಕಲ್ 176 ಮತ್ತು 175 ಎರಡರ ಬಗ್ಗೆ ಇತಿಹಾಸದಲ್ಲಿ ಚರ್ಚೆಯಾಗಿಲ್ಲ, ಅಷ್ಟು ಇವತ್ತು ಸದನದಲ್ಲಿ ಚರ್ಚೆಯಾಗಿದೆ. ಸದನದಲ್ಲಿ ಚರ್ಚೆಯಾದುದು ಅಷ್ಟಕ್ಕೇ ಸೀಮಿತವಾಗಿಲ್ಲ. ತಾವು ರೂಲಿಂಗ್ ಕೊಟ್ಟ ಮೇಲೆ ಪ್ರತ್ಯೇಕವಾಗಿ ಎಲ್ಲಾ ನಾಯಕರನ್ನು 3–4 ಬಾರಿ ಕರೆದು, ಎಲ್ಲಾ ರೂಲಿಂಗ್ ಕೊಟ್ಟ ಮೇಲೆ ಪ್ರತ್ಯೇಕವಾಗಿ ಎಲ್ಲಾ ನಾಯಕರನ್ನು 3–4 ಬಾರಿ ಕರೆದು, ಎಲ್ಲಾ ವಿಚಾರದ ಬಗ್ಗೆ ಚರ್ಚೆಯಾಗಿದೆ. ಆದರೂ ಸಹ, ಅಂತಿಮವಾಗಿ ಇವತ್ತು ಆರ್ಟಿಕಲ್ 176ರಲ್ಲಿ, ಮತ್ತು 175ರಲ್ಲಿ ಏಕಾಯಿತು ಎನ್ನುವುದರ ಬಗ್ಗೆ ಇಡೀ ಜನತೆ ನೋಡಿದೆ, ಮಾಧ್ಯಮದಲ್ಲಿ, ಪತ್ರಿಕೆಯಲ್ಲಿ ಬಂದಿದೆ. ಇವತ್ತು ಆರ್ಟಿಕಲ್ 176ರಲ್ಲಿ ಮೋಷನ್ ಮೂವ್ ಆಗಿದ್ದರೆ, ಚರ್ಚೆ ಆಗಿದ್ದರೆ ಮತ್ತೆ ಮಾನ್ಯ ರಾಜ್ಯಪಾಲರ ಭಾಷಣದ ಅವಶ್ಯಕತೆ ಇರುತ್ತಿರಲಿಲ್ಲ; ಮಾಡಿಸುತ್ತಿರಲಿಲ್ಲ, ಸರ್ಕಾರಕ್ಕೆ ಚಟವೂ ಇಲ್ಲ. ಅಥವಾ ಪ್ರತಿಷ್ಠೆನೂ ಇಲ್ಲ. ನಾವು ಬಂದಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ, ನಮಗೆ ಸಿಕ್ಕಿರುವ ಅವಕಾಶದಲ್ಲಿ ಕೆಲಸ ಮಾಡಲಿಕ್ಕೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಆಗಲೇ ಮನವಿ ಮಾಡಿಕೊಂಡಿದ್ದಾರೆ. ನಾವು ಇವತ್ತು ಆ ಸನ್ನಿವೇಶದಲ್ಲಿ ಅಲ್ಲಿ ಆರ್ಟಿಕಲ್ 176ರಲ್ಲಿ ಆಗಬೇಕಾದಂಥ ಪ್ರಕ್ರಿಯೆ ಇಲ್ಲಿ ಆಗದೇ ಇರುವುದರಿಂದ ಆರ್ಟಿಕಲ್ 175ರಲ್ಲಿ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಆಗಿರುವುದನ್ನು ಮನವರಿಕೆ ಮಾಡಿಕೊಂಡಿದ್ದೇವೆ. ಇವತ್ತು ಆರ್ಟಿಕಲ್ 175ರ ಪ್ರಕಾರ, ಮಾನ್ಯ ಸಿದ್ದರಾಮಯ್ಯನವರು ಹೇಳಬೇಕಾದ ಥ್ಯಾಂಕ್ಸ್ ಅನ್ನು ಹೇಳೋಣ, ರೆಸಲ್ಯೂಷನ್ ಬೇಡ ಎಂದು ಹೇಳಿದರು. ಒಳಗಡೆ ಚರ್ಚೆಯಾದಾಗಲೂ ಸ್ವಲ್ಪ ಹೆಚ್ಚು ಕಡಿಮೆ ಒಂದು ದಾರಿಗೆ ಬಂದಿದ್ದರು. ಆದರೆ, ಮತ್ತೆ ತಾವು ರೂಲಿಂಗ್ ಕೊಟ್ಟ ಮೇಲೆ 2–3 ಮೀಟಿಂಗ್ ಮಾಡಿ ಪುನಃ ಇಲ್ಲ ಇಷ್ಟೊಂದು ದೀರ್ಘವಾಗಿ ಚರ್ಚೆಯಾಯಿತು. ಮೊದಲೇ 2 ದಿವಸ ಚರ್ಚೆಯಾಗಿ ಮತ್ತೆ ಇಷ್ಟೊಂದು ದೀರ್ಘವಾಗಿ ಚರ್ಚೆಯಾಗತಕ್ಕಂಥದ್ದು ಈ ಸದನದಲ್ಲಿ ಒಳ್ಳೆಯ ಸಂಪ್ರದಾಯ ಅಲ್ಲ ಎಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮೊನ್ನೆ ಬಹಳ ಉದ್ವೇಗದಿಂದ ಮಾತನಾಡಿದರು. ಇವತ್ತು ಬಹಳ ಶಾಂತಿಯಾಗಿ ತಮ್ಮನ್ನು ಇನ್ನೊಂದು ಬಾರಿ ಮೀಟಿಂಗ್ ಅನ್ನು ಒಳಗಡೆ ಕರೆದು ತೀರ್ಮಾನ ತೆಗೆದುಕೊಳ್ಳಿ ಎಂದು ರಿಕ್ವೆಸ್ಟ್ ಮಾಡಿದರು. ಅದು ತಮ್ಮ ತೀರ್ಮಾನಕ್ಕೆ ಬಿಟ್ಟಿದ್ದು. ಒಳಗಡೆ ಕರೆಯತಕ್ಕಂಥದ್ದು, ತೀರ್ಮಾನ ಕೊಡತಕ್ಕಂಥದ್ದು, ಪರಿಶೀಲಿಸತಕ್ಕಂಥದ್ದು ಅದು ತಮಗೆ ಬಿಟ್ಟಿದ್ದು. ಆದರೆ, ಇವತ್ತು ಆರ್ಟಿಕಲ್ 176 ಮತ್ತು 175ರ ಬಗ್ಗೆ ಇಷ್ಟು ದೀರ್ಘವಾಗಿ ಚರ್ಚೆ ಮಾಡತಕ್ಕಂಥದ್ದು, ತಾವು ರೂಲಿಂಗ್ ಕೊಟ್ಟ ಮೇಲೆ ಯಾರೋ ಮುಂದಿನ ಸಾಲಿನಲ್ಲಿರತಕ್ಕಂಥ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು, ಪಕ್ಷದ ಮುಖಂಡರುಗಳು 3 ಜನ ಮಾತನಾಡಿ, ತಾವು ಪುನರ್ ಪರಿಶೀಲನೆ ಮಾಡಿ ಅಥವಾ ಮತ್ತೊಂದು ಬಾರಿ ಕೊಠಡಿಯಲ್ಲಿ ಕರೆದು ತೀರ್ಮಾನ ಮಾಡಿ ಎನ್ನುವುದು ಸೂಕ್ತವೇ ವಿನಃ ಇಡೀ ದಿನ ಸದನದಲ್ಲಿ ಚರ್ಚೆಯಾಗತಕ್ಕಂಥದ್ದು ಇದು ಸದನಕ್ಕೂ ಗೌರವ ತರತಕ್ಕದ್ದು ಅಲ್ಲ, ತಮ್ಮ ಪೀಠಕ್ಕೂ ಸಹ ಗೌರವ ತರತಕ್ಕದ್ದಲ್ಲ ಇವತ್ತೇನು ಮಾನ್ಯ ಶ್ರೀರಾಮರೆಡ್ಡಿಯವರು ತಮ್ಮ ರೂಲಿಂಗ್ ಬಗ್ಗೆಯೇ ನಾವು ಪ್ರಶ್ನೆ ಮಾಡುತ್ತೇವೆ ಎನ್ನುವುದು ಸರಿಯಲ್ಲ ರೂಲಿಂಗ್ ಬಗ್ಗೆ ಪ್ರಶ್ನೆ ಮಾಡತಕ್ಕಂಥದ್ದಕ್ಕೆ ಸದನದ ಸದಸ್ಯರಿಗೆ

ಅಧಿಕಾರ ಇಲ್ಲ ಅನ್ನುವುದು ಗೊತ್ತಿದ್ದೂ ಸಹ ಪ್ರಶ್ನೆ ಮಾಡಿದ್ದಾರೆ. ಇದರ ಬಗ್ಗೆ ಇವತ್ತೇನು ಹೊರಗಡೆ ಇರತಕ್ಕಂಥ ಜನತೆ ನಮ್ಮನ್ನೇನು ನೋಡುತ್ತಿದ್ದಾರೆ ಅವರ ಬಗ್ಗೆ ನಾವೂ ಯೋಚನೆ ಮಾಡಿ ಈ ತೀರ್ಮಾನ ತೆಗೆದುಕೊಳ್ಳಬೇಕು. ದಯಮಾಡಿ, ಎಲ್ಲಾ ನಾಯಕರು ಗಳಲ್ಲಿ, ಮುಂದಿನ ಸಾಲು ಮತ್ತು ಹಿಂದಿನ ಸಾಲಿನ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, ಇದನ್ನು ಇಲ್ಲಿಗೇ ಬಿಟ್ಟು ತಾವೇನಾದರೂ ಒಂದು ತೀರ್ಮಾನ ಕೊಟ್ಟು ಇದನ್ನು ಕೊನೆಗಾಣಿಸಬೇಕೆಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನನ್ನ ಹೆಸರು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಒಂದು ನಿಮಿಷ. ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ಮತ್ತು ಸದನದ ಗಮನಕ್ಕೂ ಕೂಡ ತಂದಿದ್ದೀರಿ. ಪಾರ್ಲಿಮೆಂಟಿನ, ಲೋಕಸಭಾ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದು, ಅವರು ನಾನು ಕೇಳಿದ್ದಕ್ಕೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ, ಆ ಕ್ಲಾರಿಫಿಕೇಷನ್ ಈ ರೀತಿಯಾಗಿದೆ ಎಂದು ಹೇಳಿ ತಾವು ಸದನದಲ್ಲಿ ಹೇಳಿದ್ದೀರಿ. ಆದರೆ, ತಾವು ಕೇಳಿದಂಥ ಕ್ಲಾರಿಫಿಕೇಷನ್, 19ನೇ ತಾರೀಖು ಗೌರ್ನರ್‌ರವರು ಈ ಸದನದಲ್ಲಿ ಏನು ಭಾಷಣ ಮಾಡಿದ್ದರು. ಅಡ್ರೆಸ್ ಮಾಡಿದ್ದರು, ಆ ಅಡ್ರೆಸ್‌ನ ಬಗ್ಗೆ ತಾವು ಕ್ಲಾರಿಫಿಕೇಷನ್ ಕೇಳಿದ್ದಿರಿ. ಅದಕ್ಕೆ ತಮಗೆ ಉತ್ತರವನ್ನು 21ನೇ ತಾರೀಖು ಕೊಟ್ಟಿದ್ದಾರೆ. ನನಗೆ ಅನಿಸಿರುವುದು 20 ಅಥವಾ 21.

ಅಧ್ಯಕ್ಷರು: ಅಲ್ಲ . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಒಂದು ನಿಮಿಷ. ನನ್ನದು ಮುಗಿದ ಮೇಲೆ ತಾವು ಹೇಳಿ.

ಅಧ್ಯಕ್ಷರು: ದಯಮಾಡಿ ಕೇಳಿ. 17ನೇ ತಾರೀಖು ಕ್ಯಾಬಿನೆಟ್ ಮೀಟಿಂಗ್ ಆಯಿತು. 18ಕ್ಕೆ ಗೌರ್ನರ್‌ಗೆ ಹೋಯಿತು. ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಆರ್ಟಿಕಲ್ 175ರ ಮೇಲೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರ . . . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆರ್ಟಿಕಲ್ 175ರ ಮೇಲೆ ಯಾವಾಗಲೂ ಕರೆದಿಲ್ಲ.

ಅಧ್ಯಕ್ಷರು: ದಯಮಾಡಿ ಕೇಳಿ. ಅದಕ್ಕೇ ನಾವು ಸ್ಪಷ್ಟೀಕರಣ ಕೇಳಿದೆವು. ಇಲ್ಲದಿದ್ದರೆ, ಈ ಪ್ರಶ್ನೆ ಬರುತ್ತಿರಲಿಲ್ಲ. ಆರ್ಟಿಕಲ್ 176ರಲ್ಲಿ ಕೇಳಿದ್ದರೆ, ಮತ್ತೆ ಅವರು ಅಪ್ರೋಪ್ರಿಯೇಟ್ ಎಂದು ಅವರು ಹೇಳುವ ಅಗತ್ಯವೇ ಇರಲಿಲ್ಲ. ಇದು ಆರ್ಟಿಕಲ್ 175ರ ಕೆಳಗಡೆ ದಿನಾಂಕ 24/2/2006ಕ್ಕೆ ಇಲ್ಲಿ ಮಾನ್ಯ ರಾಜ್ಯಪಾಲರನ್ನು ಭಾಷಣಕ್ಕೆ ಕರೆದಿದ್ದಾರೆ ಎಂದು ನಾವು ಅವರಿಗೆ ಒಂದು ಸ್ಪಷ್ಟೀಕರಣ ಕೇಳಿದ್ದೇವೆ. ಅದಕ್ಕೆ ಇವರು, ". . . . . it may, perhaps, be appropriate to move a Motion of Thanks on the Address to be made by the Governor on 24th February 2006. . . . ." ಎಂದು ಹೇಳಿದ್ದಾರೆ. ನಾವು ಆ ಒಂದು ಸ್ಪಷ್ಟೀಕರಣ ಕೇಳಿದ್ದೆವು. ಆರ್ಟಿಕಲ್ 176ರ ಮೇಲೆ ಇದು ಇದ್ದಿದ್ದರೆ ಮತ್ತೆ ಸ್ಪಷ್ಟೀಕರಣ ಕೇಳುವ ಅಗತ್ಯ ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೋ . . . . .ತಾವು ಸ್ಪಷ್ಟೀಕರಣ ಕೇಳಿದ್ದು 19ನೇ ತಾರೀಖಿನ ದಿವಸ ಅಡ್ರೆಸ್ ಆದಂಥ ಭಾಷಣದ ಮೇಲೆ. ತಾವು 20ನೇ ತಾರೀಖು ಪತ್ರ ಬರೆದಿರಿ, ಅದಕ್ಕೆ 21ನೇ ತಾರೀಖು ಉತ್ತರ ಬಂತು. ಆದರೆ, ಇವತ್ತು ಪ್ರಶ್ನೆ ಉದ್ಭವಿಸಿದ್ದು, 24ನೇ ತಾರೀಖು ಗೌರ್ನರ್‌ರವರು ಬಂದು ನಾನು ಆರ್ಟಿಕಲ್ 175(1)ರ ಕೆಳಗೆ ಭಾಷಣ ಮಾಡುತ್ತಿದ್ದೇನೆ ಅನ್ನತಕ್ಕಂಥದ್ದೇನೇನು ಹೇಳಿದ್ದಾರೋ ಅದರ ಕ್ಲಾರಿಫಿಕೇಷನ್ ಇಲ್ಲ.

ಅಧ್ಯಕ್ಷರು: ನೋ ನೋ . . ., ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನ ಮಾಡಿ ಕರೆದಿದ್ದಾರೆ ಅದರ ಪ್ರಕಾರ ಆರ್ಟಿಕಲ್ 175ರ ಮೇಲೆ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಅದಕ್ಕೋಸ್ಕರ ಕ್ಲಾರಿಫಿಕೇಷನ್ ತೆಗೆದುಕೊಂಡಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಾರ್, ನನ್ನ ಮಾತಾದರೂ ಕೇಳಿ. ತಾವು ಕ್ಲಾರಿಫಿಕೇಷನ್ ಕೇಳಿದ್ದು ಗೌರ್‍ನರ್‌ರವರು ಆರ್ಟಿಕಲ್ 175 ಸಬ್‌ಕ್ಲಾಸ್ (1)ರ ಕೆಳಗೆ ಅಡ್ರೆಸ್ ಮಾಡುವುದಕ್ಕೆ ಮುಂಚೆ. ಹಾಗೆ ಮುಂಚೆ ಕೇಳಿದ್ದಕ್ಕೆ ಕ್ಲಾರಿಫಿಕೇಷನ್ ಅವರೇನು ಕೊಟ್ಟಿದ್ದಾರೆ, ಅಂದರೆ, ಆರ್ಟಿಕಲ್ 176ರ ಪ್ರಕಾರ ಭಾಷಣ ಮಾಡಬಹುದು ಅನ್ನತಕ್ಕಂಥ ಅರ್ಥವೂ ಇರಬಹುದು, ಅಥವಾ ಇನ್ನೊಂದು ಆರ್ಟಿಕಲ್ 175ರ ಪ್ರಕಾರ ಬಂದು ಭಾಷಣ ಮಾಡತಕ್ಕಂಥದ್ದು ಅನ್ನುವುದೂ ಇರಬಹುದು. ಅದು ಏನೇ ಬರೆದರೂ ಕೂಡ ಅದು before 24th Address. ಅದಕ್ಕಾಗಿ ಅವರು 21ನೇ ತಾರೀಖು ಬರೆದರು. ಇಲ್ಲಿ ನಾವು ಪ್ರಶ್ನೆ ಎತ್ತಿದ್ದೇನೆಂದರೆ, 24ನೇ ತಾರೀಖು ಗೌರ್‍ನರ್‌ರವರು ಈ ಸದನಕ್ಕೆ ಆರ್ಟಿಕಲ್ 175(1)ರ ಕೆಳಗೆ ನಾನು ಅಡ್ರೆಸ್ ಮಾಡುತ್ತಿದ್ದೇನೆ, ಅದಕ್ಕೆ ತಾವು ಸದನವನ್ನು ಕರೆಯಿರಿ ಎಂದು ತಮಗೇನು ಆದೇಶವನ್ನು ಕೊಟ್ಟರು, ಆ ಆದೇಶ ಕೊಟ್ಟಿದ್ದು ಮೋಷನ್ ಆಫ್ ಥ್ಯಾಂಕ್ಸ್‌ನಲ್ಲಿ ಕೊಡುವುದಕ್ಕೆ ಬರುವುದಿಲ್ಲ. ಮೇಲ್ಮನೆಯಲ್ಲಿ ಅದರ ಬಗ್ಗೆ ಒಂದು ರೂಲಿಂಗ್ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಏನು ರೂಲಿಂಗ್ ಕೊಟ್ಟರು ಏನು ಎಂದು ಆರ್ಟಿಕಲ್ 175 ಸಬ್ ಕ್ಲಾಸ್ 1ರ ಕೆಳಗೆ ಡಿಸ್‌ಕಷನ್ ಮಾಡಬಹುದೇ ಹೊರತಾಗಿ ಅದನ್ನು ನಾವು ಮೋಷನ್ ಆಫ್ ಥ್ಯಾಂಕ್ಸ್‌ನಲ್ಲಿ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ರೂಲಿಂಗ್ ಕೂಡ ಮೇಲ್ಮನೆಯಲ್ಲಿ ಬಂದಿದೆ ಎಂದು ಹೇಳಿ ನಾನು ಕೇಳಿದ್ದೇನೆ. ಅದನ್ನು ನೋಡೋಣ. ಆದರೆ, ಇವತ್ತು ತಾವು ಇಲ್ಲಿ ಏನು ಕೋಟ್ ಮಾಡುತ್ತಿದ್ದೀರಿ, ಅದು 19ನೇ ತಾರೀಖಿನ ಅಡ್ರೆಸ್ ಬಗ್ಗೆ ಕ್ಲಾರಿಫಿಕೇಷನ್ ಮಾಡಿದಂಥದ್ದು. ಅದು ನಿಮಗೆ ಮುಟ್ಟಿದಂಥ ತಾರೀಖು 21ನೇ ತಾರೀಖು. ಗೌರ್‍ನರ್‌ರವರು ಈ ಸದನದಲ್ಲಿ ಮಾಡಿದಂಥ ಭಾಷಣವು 24ನೇ ತಾರೀಖು ಆ 24ನೇ ತಾರೀಖಿನ ಭಾಷಣದ ಬಗ್ಗೆ ಇವತ್ತು ನಾವು ಚರ್ಚೆ ಮಾಡುತ್ತಿದ್ದೇವೆಯೇ ಹೊರತಾಗಿ ಆ ಕ್ಲಾರಿಫಿಕೇಷನ್ ಇದಕ್ಕೆ ಅನ್ವಯಿಸುವುದಿಲ್ಲ. ಒಂದು ಏನಾಗುತ್ತದೆ ನೋಡಿ, ಪಾರ್ಲಿಮೆಂಟ್ ಸೆಕ್ರೆಟರಿಯೇಟ್‌ನಿಂದ ಕ್ಲಾರಿಫಿಕೇಷನ್ ತೆಗೆದುಕೊಂಡರೂ ಕೂಡ ಇವರು ಒಪ್ಪುತ್ತಿಲ್ಲ, ಇವರೆಲ್ಲಾ ಮೊಂಡರು ಅನ್ನತಕ್ಕಂಥ ತಪ್ಪು ಕಲ್ಪನೆ . . . . .

ಅಧ್ಯಕ್ಷರು: ಖರ್ಗೆ ಸಾಹೇಬರೆ, 17ನೇ ತಾರೀಖು ಕ್ಯಾಬಿನೆಟ್ ಮೀಟಿಂಗ್ ಆಯಿತು. ಮಾತನಾಡಿ ನಾನು ಸ್ಪಷ್ಟೀಕರಣ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕ್ಯಾಬಿನೆಟ್ ಆಯಿತು. ಕ್ಯಾಬಿನೆಟ್ ಆದಮೇಲೆ ನಾವು 19ನೇ ತಾರೀಖು ಆ ಕ್ಯಾಬಿನೆಟ್ ಅಪ್ರೂವ್ ಮಾಡಿದಂತೆ ಭಾಷಣವನ್ನು ಗೌರ್‍ನರ್ ಓದಿದರು.

ಅಧ್ಯಕ್ಷರು: ಅದಲ್ಲ. 17ನೇ ತಾರೀಖು . . .

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಖರ್ಗೆಯವರೆ, ಇಲ್ಲಿ ಕೇಳಿ ತಾವು ಕನ್‌ಫ್ಯೂಷನ್ ಮಾಡಿಕೊಂಡಿದ್ದೀರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ, ನಾನು ಆ ಲೆಟರ್ ನೋಡಿದ್ದೇನೆ, 21ನೇ ತಾರೀಖಿನ ಲೆಟರ್ ಅದು.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ: 19ನೇ ತಾರೀಖು ಮಾಡಿದ ಭಾಷಣದ ಬಗ್ಗೆ ಅಲ್ಲ ಅದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮೊದಲೇ ಹೇಗೆ ತೆಗೆದುಕೊಳ್ಳುತ್ತಾರೆ? ನೀವು ನಿನ್ನೆ ತಾನೆ ಓದಿದಿರಿ, . . .

(ಗೊಂದಲ)

ಅಧ್ಯಕ್ಷರು: ಸನ್ಮಾನ್ಯ ರಾಜ್ಯಪಾಲರು 19ನೇ ಜನವರಿಯಲ್ಲಿ ಮೊದಲನೆ ಸಾರಿ ಬಂದು ಆರ್ಟಿಕಲ್ 176ರ ಕೆಳಗಡೆ ಇಲ್ಲಿ ಭಾಷಣ ಮಾಡಿದ್ದಾರೆ. ಈಗ ಹೊಸ ಸರ್ಕಾರ ಬಂದಮೇಲೆ ಅವರು 17ನೇ ತಾರೀಖು ಮಂತ್ರಿಮಂಡಲದ ಸಭೆ ಮಾಡಿ, ನೀವು ಆರ್ಟಿಕಲ್ 175ರ ಕೆಳಗಡೆ ಬಂದು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಬೇಕೆಂದು ರಿಕ್ವೆಸ್ಟ್ ಮಾಡಿದ್ದಾರೆ. 18ನೇ ತಾರೀಖು ಗೌರ್ನರ್ ಕಡೆಯಿಂದ ಒಂದು ಪತ್ರ ನಮಗೆ ಬಂದಿದೆ, ಆಗ ನಾವು ಲೋಕಸಭಾ ಸಚಿವಾಲಯಕ್ಕೆ, 20ನೇ ತಾರೀಖು ಕಾಗದ ಬರೆದು ಸ್ಪಷ್ಟೀಕರಣ ಕೇಳಿದೆವು. ಸ್ಪಷ್ಟೀಕರಣ ಏನು ಅಂದರೆ, ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. . ". . . . .appropriate to move a Motion of Thanks on the Address to be made by the Governor on 24th February, 2006." ಅದಕ್ಕೆ ನಾವು ಮೊದಲೇ ಸ್ಪಷ್ಟೀಕರಣ ಕೇಳಿದೆವು. ಏಕೆಂದರೆ ಈ ಕ್ವೊಶ್ಚನ್ಸ್ ಎಲ್ಲಾ ಬರುತ್ತೆಂದು ಮೊದಲೇ ಕೇಳಿದೆವು.

(ಗೊಂದಲ)

ಶ್ರೀ ಎಸ್. ಕುಮಾರ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ತಾವು ಈಗ ಉತ್ತರ ಓದುತ್ತಿದ್ದೀರಾ, ತಾವು ಯಾವ ಪ್ರಶ್ನೆಗಳನ್ನು ಪಾರ್ಲಿಮೆಂಟರಿ ಸೆಕ್ರೆಟರಿಯೇಟ್‌ಗೆ ಕೇಳಿದ್ದೀರಿ ಎನ್ನುವುದನ್ನು ಓದಿ you tell us.

(ಗೊಂದಲ)

ಅಧ್ಯಕ್ಷರು: ಕುಮಾರ್ ಬಂಗಾರಪ್ಪನವರೆ, ನಾನೇನು ಸಂಸ್ಕೃತದಲ್ಲಿ ಹೇಳುತ್ತಿದ್ದೇನೆಯೇ? ನೀವು ದಯಮಾಡಿ ಸದಸ್ಯರು ಅರ್ಥಮಾಡಿಕೊಳ್ಳಬೇಕು ಕನ್‌ಫ್ಯೂಷನ್ ಮಾಡಬೇಡಿ. ಆರ್ಟಿಕಲ್ 176ರ ಕೆಳಗಡೆ ಒಂದು ಸಾರಿ 19ನೇ ಜನವರಿಯಲ್ಲಿ ಭಾಷಣ ಮಾಡಿದ್ದಾರೆ. . . ಇಲ್ಲಿ ಕೇಳಿ, ಹೊಸ ಸರ್ಕಾರ ಬಂದಮೇಲೆ 17ನೇ ತಾರೀಖು ಮಂತ್ರಿಮಂಡಲದಲ್ಲಿ ತೀರ್ಮಾನ ಮಾಡಿ ಅವರು ಆರ್ಟಿಕಲ್ 175ರ ಕೆಳಗಡೆ ಭಾಷಣ ಮಾಡುವಂತೆ ವಿನಂತಿ ಮಾಡಿದ್ದಾರೆ. . 18ನೇ ತಾರೀಖು ನನಗೆ ಆ ಮಾಹಿತಿ ಬಂದಿದೆ. ಆಮೇಲೆ ನಾನು ಕ್ಲಾರಿಫಿಕೇಷನ್ ಕೇಳಿದ್ದು. It is our duty ನನ್ನ ಕ್ಲಾರಿಫಿಕೇಷನ್‌ಗೆ ಲೋಕಸಭಾ ಸೆಕ್ರೆಟರಿಯೇಟ್‌ನವರು ಈ ರೀತಿ ಉತ್ತರ ಕೊಟ್ಟಿದ್ದಾರೆ. . . . .

ಶ್ರೀ ಎಸ್. ಕುಮಾರ್ ಬಂಗಾರಪ್ಪ: ತಮಗೆ ಉತ್ತರ ಸಿಕ್ಕಿದೆ, ...

ಅಧ್ಯಕ್ಷರು: ಅಲ್ಲ, ಅದನ್ನ ನಾನು ಸಭೆಯ ಗಮನಕ್ಕೆ ತಂದೆ ಎಂದು ಹೇಳಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಲೋಕಸಭಾ ಸೆಕ್ರೆಟೆರಿಯವರಿಗೆ ಯಾವ ಲೆಟರ್ ಬರೆದಿದ್ದೀರಿ ಎನ್ನುವುದನ್ನೂ ಓದಿಬಿಡಿ . . . ತಾವು ಯಾವ ಪ್ರಶ್ನೆಯನ್ನು ಪಾರ್ಲಿಮೆಂಟರಿ ಸೆಕ್ರೆಟೆರಿಗೆ ಕಳುಹಿಸಿದ್ದೀರಿ ಎನ್ನುವುದನ್ನು ಓದಿ, ನಂತರ ಈ ಉತ್ತರ ಹೇಳಿ.

ಅಧ್ಯಕ್ಷರು: ಆಗಲೇ ಓದ್ದಿದ್ದೇನೆಲ್ಲಾ ಸ್ವಾಮಿ . . .

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಯಾವುದಕ್ಕೋಸ್ಕರ ಪ್ರಶ್ನೆ ಕೇಳಿದ್ದಿರಿ ಎಂಬುದನ್ನು ಇಲ್ಲಿ ಓದಿ . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಹೊಸ ಸರ್ಕಾರ ಬಂದ ಮೇಲೆ 17ನೇ ತಾರೀಖು ಕ್ಯಾಬಿನೆಟ್ ಆಯಿತು, ಅಲ್ಲಿ ಇದು ನಿರ್ಧಾರವಾಯಿತು. ನಿರ್ಧಾರವಾಗಿ 24ನೇ ತಾರೀಖಿಗೆ ಏನು ಮಾನ್ಯ ರಾಜ್ಯಪಾಲರು ಭಾಷಣ ಮಾಡಿದರು. ಆ ಬಗ್ಗೆ 17ನೇ ತಾರೀಖಿನ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಿದೆ. ಅದಾದ ಮೇಲೆ ತಾವು ಲೋಕಸಭಾ ಸೆಕ್ರೆಟೆರಿಯೇಟ್‌ಗೆ ಸ್ಪಷ್ಟೀಕರಣ ಕೇಳಿದಿರಿ.. ಮಾನ್ಯ ಖರ್ಗೆಯವರು ಹೇಳುತ್ತಿರುವುದು ಹಿಂದಿನ ಹಳೆಯ ಭಾಷಣ. ಹಿಂದಿನ ಸರ್ಕಾರದ ಬಗ್ಗೆ, 19ನೇ ತಾರೀಖಿನ ಬಗ್ಗೆ ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಅವರು ಸಾಕ್ಷಿ ಇದ್ದಾರೆ ನೋಡಿ. .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸ್ಪೀಕರ್‌ರವರು ಸ್ಪಷ್ಟೀಕರಣ ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ: ನೀವು ಆ ಲೆಟರ್ ಓದಿಲ್ಲ, ಅದನ್ನು ಇನ್ನೊಂದು ಸಲ ತರಿಸಿಕೊಂಡು ನೋಡಿ. ನೀವು ಓದಿರತಕ್ಕಂಥ ಕ್ಲಾರಿಫಿಕೇಷನ್ . . ಶೆಟ್ಟರ್‌ರವರೆ, ಒಂದ್ನಿಮಿಷ ಕುಳಿತುಕೊಳ್ಳಿ . . ನಾನು ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಲೋಕಸಭಾ ಸೆಕ್ರೆಟರಿಯೇಟ್‌ಗೆ, ನೀವು ಅಲ್ಲಿ ಸೆಕ್ರೆಟರಿ ಜನರಲ್, ಲೋಕಸಭಾದಲ್ಲಿ ಯಾರು ಇದ್ದಾರೆ, ಅವರಿಗೆ ಬರೆದಿರತಕ್ಕಂಥದ್ದು. ಪಾರ್ಲಿಮೆಂಟರಿ ಸೆಕ್ರೆಟರಿಗೆ ಬರೆದಿರತಕ್ಕಂಥದ್ದು 19ನೇ ತಾರೀಖು ಜನವರಿ. ಅವರು 20ನೇ ತಾರೀಖು ಜನವರಿ ನಿಮಗೆ ಕ್ಲಾರಿಫಿಕೇಷನ್ ಕಳುಹಿಸಿದ್ದಾರೆ. ಇದು 24ನೇ ಫೆಬ್ರವರಿಯಲ್ಲಿ ಭಾಷಣ ಆಗಿರುವುದು, ಅವರು ಕಳುಹಿಸಿರತಕ್ಕಂಥ ಕ್ಲಾರಿಫಿಕೇಷನ್ 19ನೇ ಜನವರಿಯಲ್ಲಿ ಇವರು ಏನು ಪತ್ರ ಬರೆದಿದ್ದಾರೆ ಅದಕ್ಕೆ 20ನೇ ಜನವರಿ, ಇಲ್ಲಿ ಕೇಳಿ ಶೆಟ್ಟರ್‌ರವರೆ, ಆಮೇಲೆ ಮಾತನಾಡಿ . . . (ಗೊಂದಲ). . . ನಾನು ಓದಿದ್ದೇನೆ ಬಿಡಿ.

(ಗೊಂದಲ)

ಅಧ್ಯಕ್ಷರು: ಅವರು 20ನೇ ತಾರೀಖು ನಮಗೆ ಪತ್ರ ಬರೆದಿದ್ದಾರೆ. .

ಶ್ರೀ ಜಗದೀಶ್ ಶೆಟ್ಟರ್: ಕನ್‌ಫ್ಯೂಷನ್ ಮಾಡಬೇಡಿ.

ಶ್ರೀ ಎನ್. ಚಲುವರಾಯಸ್ವಾಮಿ: 24ಕ್ಕೆ ಆಗುತ್ತದೆ ಎಂದೇ ಅವರು ಬರೆದಿರುವುದು.

ಶ್ರೀ ಸಿದ್ಧರಾಮಯ್ಯ: ನಾನು ಆ ಪತ್ರ ಓದಿದೆ, ಮಾನ್ಯ ಖರ್ಗೆಯವರು ಕೂಡ ಓದಿದ್ದಾರೆ ನಾನು ಕೂಡ ಓದಿದ್ದೇನೆ. 19ನೇ ತಾರೀಖು ಲೆಟರ್ ಹೋಗಿದೆ, 20ನೇ ತಾರೀಖು ಅವರು ಉತ್ತರ ಬರೆದಿರುವುದು. 24ನೇ ತಾರೀಖು ಭಾಷಣ ಆಗಿರುವುದು. 175(1)ರ ಕೆಳಗಡೆ ಭಾಷಣ ಮಾಡಿದ್ದಾರೆ, ಅದಕ್ಕೂ ಆ ಕ್ಲಾರಿಫಿಕೇಷನ್‌ಗೆ ಏನು ಸಂಬಂಧವಿದೆ ಮಾನ್ಯ ಅಧ್ಯಕ್ಷರೆ?

ಅಧ್ಯಕ್ಷರು: ಹೌದು ಸ್ವಾಮಿ ದಯಮಾಡಿ, ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

Sri Siddaramaiah: The clarification by the Parliamentary Secretariat is nothing to do . . . . .

(Interruptions)

Mr. Speaker: It is very clear. ಕ್ಲಿಯರ್ ಆಗಿದೆ. ಹೊಸ ಮಂತ್ರಿಮಂಡಲ ಬಂದಮೇಲೆ 17ರ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾದಂತೆ ಆರ್ಟಿಕಲ್ 175ರ ಕೆಳಗಡೆ ಮಾನ್ಯ ರಾಜ್ಯಪಾಲರು ಬಂದು ಭಾಷಣ ಮಾಡಬೇಕೆಂದು ಅವರಿಗೆ ವಿನಂತಿ ಮಾಡಿದ ಮೇಲೆ, ನಾವು 18ನೇ ತಾರೀಖು ನೋಟಿಫಿಕೇಷನ್ ಇಶ್ಯೂ ಮಾಡಿದೆವು ಅದರ ಮೇಲೆ ನಾವು ಕ್ಲಾರಿಫಿಕೇಷನ್ ಕೇಳಿದೆವು. 20ನೇ ತಾರೀಖು ಲೋಕಸಭಾ ಸಚಿವಾಲಯಕ್ಕೆ ಪತ್ರ ಬರೆದೆವು, ಅವರು 21ನೇ ತಾರೀಖಿಗೆ ಪತ್ರ ಬರೆದಿದ್ದಾರೆ. ಆ ಪತ್ರವನ್ನು ನಾನು ಇಲ್ಲಿ ಓದಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಹೊಸ ಸರ್ಕಾರ ಬಂದಮೇಲೆ ಮಂತ್ರಿಮಂಡಲದ ತೀರ್ಮಾನದಂತೆ ಮನವಿ ಮಾಡಿಕೊಂಡು ನಂತರ ಅವರು ಬಂದು ಇಲ್ಲಿ ಭಾಷಣ ಮಾಡಿದರು. . ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಸಿದ್ದರಾಮಯ್ಯನವರು ಹಿಂದಿನ ಜನವರಿ ತಿಂಗಳಲ್ಲಿ ಆಗಿರುವಂಥದ್ದನ್ನು ಹೇಳುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಅವರು ಏನು ಹೇಳಿದರೂ ಒಪ್ಪುವ ಸ್ಥಿತಿಯಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮುಂದೂಡುವುದಕ್ಕೆ ಮುನ್ನ ಮತ್ತೊಂದು ಸಾರಿ ನಾನು ಎಲ್ಲಾ ವಿರೋಧ ಪಕ್ಷದ ಮುಖಂಡರನ್ನು ಕರೆಯುತ್ತೇನೆ, ಮತ್ತೊಂದು ಸಲ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಈಗ ಸದನವನ್ನು ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 46 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3-00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಸಂಜೆ 5.22ಕ್ಕೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

4. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಪೂರಕ ಅಂದಾಜುಗಳ (ಎರಡನೆಯ ಕಂತು) ಮಂಡನೆ.

ಅಧ್ಯಕ್ಷರು: ಯಡಿಯೂರಪ್ಪನವರೆ, ಒಂದು . . .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ತಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ ಅನೌನ್ಸ್ ಮಾಡುತ್ತೇನೆಂದು . . . . .

ಅಧ್ಯಕ್ಷರು: ಅದಲ್ಲ, ವಿತ್ತೀಯ ಕಾರ್ಯಕಲಾಪಕ್ಕೆ ಸಂಬಂಧಪಟ್ಟ ಹಾಗೆ ಇವತ್ತು ಮೂವ್ ಮಾಡಿ ನಾಳೆ ಡಿಸ್‌ಕಸ್ ಆಗಬೇಕು.

ಶ್ರೀ ವಾಟಾಳ್ ನಾಗರಾಜ್: ಬೇಡಿ, ಅದೆಲ್ಲಾ ಬೇಡ.

ಅಧ್ಯಕ್ಷರು: ದಯಮಾಡಿ ಅರ್ಥ ಮಾಡಿಕೊಳ್ಳಿ, ಈಗ ಮೂವ್ ಮಾಡಿ . . .

ಶ್ರೀ ವಾಟಾಳ್ ನಾಗರಾಜ್: ಬೇಡಿ, ಅದು ಒಳ್ಳೆಯ ಸಂಪ್ರದಾಯವಲ್ಲ. ಬೆಳಿಗ್ಗೆ ತಾವು ಲೋಕಸಭಾದಿಂದ ಬಂದಿರುವುದನ್ನು ಓದಿದಿರಿ, ಇನ್ನು ರಾಜ್ಯಸಭೆಯಿಂದ ಬಂದಿರುವಂತಹ ನಿರ್ಣಯವನ್ನು ತಾವು ಓದಿ.